ಸಿಂಪ್ರ

ಮಕ್ಕಳ ಸಾಹಿತ್ಯ ಅಧ್ಯಯನ ಮಾಲೆ-೧

- ರಸಿಕ ಪುತ್ತಿಗೆ–ಒಂದು ನೆನಪು
- ಮಲ್ಲಾರಿ ಅವರ ಕತೆಗಳು
- 'ಕಷ್ಟಾಂಕ' ಆ್ಯಂಟನ್ ಚೆಕಾವ್ ಅವರ ನೀಳ್ಗತೆ–ಒಂದು ಪರಿಚಯ
- 'ಅಮ್ಮ ಅವರ ಬಸ್ಸು ಸವಾರಿ–ಒಂದು ಅನಿಸಿಕೆ'

ಸಂಧ್ಯಾ ಸಾಹಿತ್ಯ ವೇದಿಕೆ
ಕಲಬುರ್ಗಿ

ಒತ್ತಾಯ ಮತ್ತು ಒರಟುತನದಿಂದ ಮಕ್ಕಳಿಗೆ ಶಿಕ್ಷಣ ನೀಡಬೇಡಿ;
ಅವರನ್ನು ರಂಜಿಸುವ ಮಾಧ್ಯಮ ಅನುಸರಿಸಿ– ಪ್ಲೇಟೋ

'ಪುಟ್ಟಕ್ಕನ ಪತ್ರಗಳು'

ಮಕ್ಕಳಿಗಾಗಿ ವೇದಿಕೆಯಿಂದ ಪ್ರಕಟಿತವಾಗಿರುವ
'ಪಾಕೆಟ್ ಸೈಜ್' ಮೊದಲ ಪುಸ್ತಕ. ಪುಟ್ಟಕ್ಕ ತನ್ನ
ಗೆಳತಿಗೆ ಬರೆದ ಪತ್ರಗಳನ್ನು ನಿಮ್ಮ ಮಕ್ಕಳೂ ಓದಲಿ

ಸಾದಾ ಪ್ರತಿ : ೪ ರೂ.
ವಿಶೇಷ ಪ್ರತಿ : ೫ ರೂ.

ಬರಲಿರುವ 'ಸಂಧ್ಯಾ' ಮಕ್ಕಳ ಸಾಹಿತ್ಯ ಅಧ್ಯಯನ ಮಾಲೆ
೨ ರಲ್ಲಿ

* ಗುಂಬ್ಬಿ ಮರಿಯ ವಿಸ್ಮಯ ವಿಹಾರ, ಒಂದು ಧಾರಾವಾಹಿ
* ಗೀತಾ ಕುಲಕರ್ಣಿ ಅವರ 'ನೇಜಿ ಗುಬ್ಬಚ್ಚಿ'
* ರುಡ್‌ಯಾರ್ಡ್ ಕ್ಲಿಪಿಂಗ್‌ರ ಕಥನ ವಿಶೇಷ

'ಸಂಧ್ಯಾ'

ಮಕ್ಕಳ ಸಾಹಿತ್ಯ ಅಧ್ಯಯನ ಮಾಲೆ–೧

□□

ಸಂಧ್ಯಾ ಸಾಹಿತ್ಯ ಪ್ರಕಾಶನ
'ಗ್ರೀಷ್ಮ', ೧೪೫/೨ಎ
ಮೂಕಾ ಲೇಔಟ್, ಜೇವರ್ಗಿ ರಸ್ತೆ
ಕಲಬುರ್ಗಿ

SANDHYA

MAKKALA SAHITYA ADHYANAMALE-1

A Collection of articles in Kannada on children literature

Published hy Saudhya Sahitya Prakashana. 145/2A, 'Grishma', Maka Layout, Jewargi Rd, Gulbarga-585102

First book in the series on studies in children literature

Price Rs. 5/- Pages 32 1994

'ಸಂಧ್ಯಾ'

ಮಕ್ಕಳ ಸಾಹಿತ್ಯ ಅಧ್ಯಯನ ಮಾಲೆ-೧

೧೯೯೪ ಸಪ್ಟೆಂಬರ

ಸಂಪಾದನೆ : ಸಂಧ್ಯಾ ಸಾಹಿತ್ಯ ವೇದಿಕೆಯ ಗೆಳೆಯರು

ಪ್ರಕಾಶನ : ಸಂಧ್ಯಾ ಸಾಹಿತ್ಯ ಪ್ರಕಾಶನ

ಮೂರು ತಿಂಗಳಿಗೊಂದರಂತೆ ವರ್ಷದಲ್ಲಿ ನಾಲ್ಕು ಸಂಚಿಕೆಯ ಯೋಜನೆ.

ಬಿಡಿ ಸಂಚಿಕೆ : ೫ ರೂ.

ವರ್ಷದ ನಾಲ್ಕು ಸಂಚಿಕೆಗಳು : ೧೮ ರೂ.

ವಿಳಾಸ : ಸಂಧ್ಯಾ ಸಾಹಿತ್ಯ ವೇದಿಕೆ

೧೪೫/೨ಎ, 'ಗ್ರೀಷ್ಮ' ಮಾಕಾಲೇಔಟ್, ಜೇವರ್ಗಿ ರಸ್ತೆ,

ಗುಲಬರ್ಗಾ-೫೮೫೧೦೨

ಕೃತಜ್ಞತೆಗಳು :

ಶ್ರೀ ಮಿಲನಸಾರ ಎ. ಅಹಮದ್, ಶ್ರೀ ಬಸು ಬೇವಿನಗಿಡದ, ಶ್ರೀಮತಿ ವಿಮಲಾ ಮಳಗಾವಿ ಶ್ರೀ ಎಂ. ಶಿವಲಿಂಗಯ್ಯ, 'ಗ್ರಿನೋಬಲ್ಸ್'ದ ಶ್ರೀ ರಾಜೇಂದ್ರ ಪಾಟೀಲರು ಹಾಗೂ ಅವರ ಸಿಬ್ಬಂದಿ

Printed at: Grenobles (P) Ltd. Super Market, Gulbarga
Phone: 21741, 20822

‘ಸಂಧ್ಯಾ’
ನಿಮ್ಮೊಡನೆ.........

ಮಕ್ಕಳ ಸಾಹಿತ್ಯ ಅಧ್ಯಯನ ಮಾಲೆ ಆಸಕ್ತ ಗೆಳೆಯರ ಒಂದು ಪ್ರಯತ್ನ. ‘ಸಂಧ್ಯಾ ಸಾಹಿತ್ಯ ವೇದಿಕೆ’ ಎಂದು ಸೇರಿಕೊಂಡಿರುವ ನಾವು ಗ್ರಹಗೋಷ್ಠಿಗಳೆಂದು ಮನೆಮನೆಗಳಲ್ಲಿ, ಆತಿಥ್ಯದ ಭಾರವನ್ನು ಆಆ ಮನೆಯವರ ಮೇಲೆ ಹಾಕಿ ಸಾಹಿತ್ಯಾಸಕ್ತಿಯ ಜನರನ್ನು ಕೂಡಿಸಿ ಕೊಂಡು ಒಂದಷ್ಟು ಕಾರ್ಯಕ್ರಮಗಳನ್ನು ಮಾಡುತ್ತ ಬರುತ್ತಿದ್ದೇವೆ,

ಮಕ್ಕಳ ಸಾಹಿತ್ಯ ಕುರಿತು ಒಂದಿಷ್ಟು ವಿಶೇಷವಾಗಿ ತೊಡಗಿಕೊ ಳ್ಳುವ ಬಯಕೆ ನಮ್ಮದು. ಮಕ್ಕಳ ಸಾಹಿತ್ಯ ಕನ್ನಡದಲ್ಲಿ ಗಂಭೀರ ವಾದ ಅಧ್ಯಯನಕ್ಕೆ ಒಳಗಾದಂದೇ ಇಲ್ಲ ಎನ್ನುವ ಮಾತನ್ನು ಬಹುಶಃ ಎಲ್ಲರೂ ಒಪ್ಪುತ್ತಾರೆ, ಮಕ್ಕಳ ಪುಸ್ತಕ ಪ್ರಕಟಿಸುವುದೇ ಒಂದು ದೊಡ್ಡ ಸಮಸ್ಯೆ ನಮ್ಮ ಲೇಖಕರಿಗೆ, ಆದರೆ ಮಕ್ಕಳ ಸಾಹಿತ್ಯ ಖಂಡಿತವಾಗಿಯೂ ನಾವೆಲ್ಲ ವಿಶೇಷವಾಗಿಯೇ ಗಮನಿಸಬೇಕಾದುದು. ಆ ನಿಟ್ಟಿನಲ್ಲಿ ‘ಮಕ್ಕಳ ಸಾಹಿತ್ಯ ಅಧ್ಯಯನ ಮಾಲೆ’ ಒಂದು ಆಸಕ್ತಿಯ ಪ್ರಯತ್ನ.

ಮಕ್ಕಳಲ್ಲಿ. ಮಕ್ಕಳ ಸಾಹಿತ್ಯದಲ್ಲಿ ಅಕ್ಕರೆ ಉಳ್ಳವರೆಲ್ಲ ಕೈ ನೀಡಿ ದರೆ ನಮಗೊಂದಿಷ್ಟು ದಾರಿ ಕ್ರಮಿಸಲು ಸಾಧ್ಯ.

ಸಂಧ್ಯಾ ಸಾಹಿತ್ಯ ವೇದಿಕೆ
ಕಲಬುರ್ಗಿ

ನಮ್ಮ ಮೊದಲ ಸಂಚಿಕೆಗಾಗಿ

ರಸಿಕ ಪುತ್ತಿಗೆಯವರನ್ನ ನೆನೆಯುತ್ತ........

....

ರಸಿಕ ಪುತ್ತಿಗೆ ಮಕ್ಕಳಿಗಾಗಿ ಬಹಳ ಆಸಕ್ತಿಯಿಂದ ಬರೆದ ಲೇಖಕರು. ಬಹಳಷ್ಟು ಕೃತಿಗಳನ್ನು ಅವರಿಂದ ನಿರೀಕ್ಷಿಸಿದ್ದ ಮಕ್ಕಳಿಗೆ, ಮಕ್ಕಳ ಸಾಹಿತ್ಯಾಸಕ್ತರಿಗೆ ಅವರ ಅನಿರೀಕ್ಷಿತ ಅಗಲಿಕೆ ಒಂದು ಕೊರಗು. ಅವರೊಡನೆಯ ಕೆಲ ನೆನಪುಗಳು ನಮ್ಮ ಅಧ್ಯಯನ ಮಾಲೆಗಾಗಿ ಇಲ್ಲಿವೆ. ನೀಡಿರುವವರು ಅವರ ಕಿರಿಯ ಅಳಿಯ ಶ್ರೀ ಎ. ರಂಗನಾಥ ಅವರು. ಇದಕ್ಕಾಗಿ ಸಹಕರಿಸಿದವರು ರಸಿಕ ಪುತ್ತಿಗೆಯವರ ಶ್ರೀಮತಿ ಡಿ. ಪ್ರೇಮಲತಾ ಆಚಾರ್ಯ ಅವರು.

ಹೀಗಿದ್ದರು ರಸಿಕ ಪುತ್ತಿಗೆ......

— ಎ. ರಂಗನಾಥ

ಸಾಹಿತ್ಯದಲ್ಲಿ ನಾನಾ ಪ್ರಕಾರಗಳಿವೆ. ಕಥೆ, ಕಾದಂಬರಿ, ಕವನ, ಪ್ರವಾಸ ಕಥನ, ಆತ್ಮ ಕಥೆ, ವಿಮರ್ಶೆ, ನಾಟಕ ಹೀಗೆ ಹಲವಾರು ರೀತಿ ಸಾಹಿತ್ಯ ಕ್ಷೇತ್ರದಲ್ಲಿಹಿ.ಈ ಗುಂಪಿನಲ್ಲಿ ಕೆಲವರು ಒಂದೆರಡುಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಅದರಲ್ಲೇ ಮುಂದುವರಿದು ಹೆಸರುಗಳಿಸುತ್ತಾರೆ.ಈ ಎಲ್ಲಾ ಕ್ಷೇತ್ರಗಳಲ್ಲೂ ಕೈಯಾಡಿಸಿ ಹೆಸರನ್ನೂ ಸಂಪಾದಿಸಿದವರು ವಿರಳ. ಅಂತಹ ವಿರಳರ ಪೈಕಿ ದಿವಂಗತ ರಸಿಕಪುತ್ತಿಗೆಯವರು ಒಬ್ಬರು. ಸಾಹಿತ್ಯ ಕ್ಷೇತ್ರದಲ್ಲಿ ಅವರು ಕೈ ಹಾಕದ ವಿಷಯಗಳು ಇಲ್ಲ ಎಂದರೆ ಅತಿಶಯೋಕ್ತಿಯಲ್ಲ. ಅವರು ಕೃಷಿ ಮಾಡಿದ

ಸಾಹಿತ್ಯದ ಎಲ್ಲಾ ಪ್ರಕಾರಗಳ ಪುಸ್ತಕಗಳು ದೊಡ್ಡ ಗ್ರಂಥಗಳಲ್ಲವಾದರೂ ಸಣ್ಣಪುಟ್ಟ ಪುಸ್ತಕಗಳಾಗಿ ಜನಪ್ರಿಯ ಕಾಲಂಗಳಲ್ಲಿ ವ್ಯಕ್ತವಾಗಿವೆ.

ರಸಿಕ ಪುತ್ತಿಗೆಯವರು ಹಲವಾರು ಭಾಷೆಗಳ ಪರಿಚಯ ಹೊಂದಿದ್ದು ಮಾತ್ರವಲ್ಲ, ಅವುಗಳ ಸಾರವನ್ನು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹರಿಸಿದ್ದಾರೆ. ಸಂಸ್ಕೃತ ಭಾಷೆ ಅವರ ಪ್ರಿಯವಾದ ಭಾಷೆ. ವೈದಿಕ ಮನೆತನದ ಅವರು ಸಂಸ್ಕೃತ ಪಂಡಿತರಾಗಿದ್ದರು. ಸಂಸ್ಕೃತದ ಜೊತೆಗೆ ಹಿಂದಿಯಲ್ಲೂ ಅವರು ಪಂಡಿತರು. ಮಾತೃ ಭಾಷೆ ಹಿಂದಿ ಭಾಷೆ ಆಗಿರುವವರೂ ಕೂಡ ರಸಿಕ ಪುತ್ತಿಗೆಯವರ ಹಿಂದಿ ಪಾಂಡಿತ್ಯ ಕಂಡು ಬೆರಗಾಗಿ ಮೆಚ್ಚುತ್ತಿದ್ದರು. ದಕ್ಷಿಣ ಭಾರತದ ಕನ್ನಡ ಭಾಷೆಯೊಂದಿಗೆ ಮಾತೃ ಭಾಷೆ ತುಳುವಿನಲ್ಲಿ ಅವರು ಸಾಹಿತ್ಯ ರಚಿಸಿದ್ದಾರೆ. ತಮಿಳು, ತೆಲುಗು, ಕೊಂಕಣಿ, ಮಲೆಯಾಳಂ, ಮರಾಠಿ ಭಾಷೆಗಳೂ ಅವರಿಗೆ ತಿಳಿದಿದ್ದವು. ಬಾಲ್ಯದಿಂದಲೇ ಸಾಹಸದ ಬದುಕು ಅರಸಿದ ಅವರಿಗೆ ವಿವಿಧ ಭಾಷೆಗಳ ಜೊತೆಗೆ ಸಮಾಜದ ವಿವಿಧ ವರ್ಗಗಳವರೊಂದಿಗೆ ಸಂಪರ್ಕ ದೊರೆತು ಯಾವುದೇ ವಿಷಯವಾದರೂ ತಕ್ಷಣ ಅರ್ಥವಾಗಿ ಅದಕ್ಕೆ ಸೂಕ್ತ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದರು.

ರಸಿಕ ಪುತ್ತಿಗೆಯವರು ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಸಾಹಿತ್ಯ ಕೃಷಿ ಮಾಡಿದರೂ ಅವರಿಗೆ ಅತ್ಯಂತ ಪ್ರಿಯವಾದ ಪ್ರಕಾರವೆಂದರೆ ಮಕ್ಕಳ ಸಾಹಿತ್ಯ. ಪ್ರೌಢಶಾಲಾ ಶಿಕ್ಷಕರಾಗಿ 30 ವರ್ಷಗಳಷ್ಟು ಸೇವೆ ಸಲ್ಲಿಸಿದ ಅವರು ಶಾಲೆಯಲ್ಲಿ ಮಕ್ಕಳೊಂದಿಗೆ ಹಾಡಿ ಪಾಡಿ ನಲಿದು ಆ ಅನುಭವವನ್ನು ಬರವಣಿಗೆಗೆ ಇಳಿಸಿ ಯಶಸ್ವಿಯಾದರು. ಮಕ್ಕಳ ಸಾಹಿತ್ಯದಲ್ಲಿ ಎರಡು ವಿಧ ಎಂದು ಅವರು ಯಾವಾಗಲೂ ಹೇಳುತ್ತಿದ್ದರು. ಮಕ್ಕಳಿಗಾಗಿ ಹಿರಿಯರು ಬರೆಯುವುದು, ಹಾಗೂ ಮಕ್ಕಳೇ ಬರೆಯುವುದು. ಮಕ್ಕಳಿಗಾಗಿ ರಸಿಕ ಪುತ್ತಿಗೆಯವರು ಬರೆದಿದ್ದು ಸಾಕಷ್ಟಿದ್ದರೂ, ಮಕ್ಕಳಿಂದ ಬರೆಸಿದ್ದೂ ಸಹ ಸಾಕ

ಟ್ಟಿದೆ. ಅವರು ವಾಸಿಸುತ್ತಿದ್ದ ಚೆನ್ನಪಟ್ಟಣದಿಂದ ಆರಂಭಿಸಿ ರಾಜ್ಯದ ಉದ್ದಗಲದಿಂದ ಪ್ರತಿದಿನ ಅನೇಕ ಮಕ್ಕಳು ಅವರೊಂದಿಗೆ ಸಾಹಿತ್ಯದ ವಿಷಯವಾಗಿ ಪತ್ರಬರೆದು, ಮೌಖಿಕವಾಗಿ ಚರ್ಚಿಸುವಷ್ಟರ ಮಟ್ಟಿಗೆ ಅವರು ಮಕ್ಕಳೊಂದಿಗೆ ಆತ್ಮೀಯತೆ ಹೊಂದಿದ್ದರು.

ಸಾಹಿತಿಯಾದವರು ಯಾವಾಗಲೂ ಕಣ್ಣು-ಕಿವಿಗಳನ್ನು ತೆರೆದಿಟ್ಟಿರಬೇಕು. ತನ್ನ ಸುತ್ತಮುತ್ತ ನಡೆಯುವ ವಿದ್ಯಮಾನಗಳು, ಮಾತುಕತೆಗಳು ಅವರ ಸಾಹಿತ್ಯ ಕೃಷಿಗೆ ನೆರವಾಗುತ್ತವೆ. ಇಂತಹ ಗುಣವನ್ನು ಶ್ರೀ ರಸಿಕ ಪುತ್ತಿಗೆ ಹೊಂದಿದ್ದರು. ಯಾರೊಂದಿಗಾದರೂ ಮಾತನಾಡುವಾಗ, ಸಭೆ ಸಮಾರಂಭಗಳಲ್ಲಿ ಭಾಗವಹಿಸಿದಾಗ, ಪ್ರಯಾಣ ಮಾಡುವಾಗ ಅವರು ಹತ್ತಾರು ಜನರೊಂದಿಗೆ ಸ್ನೇಹ ಸಂಪಾದಿಸುತ್ತಿದ್ದರು. ಮಾತನ್ನು ಬಲ್ಲವರಾದ ಅವರು ಮೌನಿಗಳನ್ನೂ ಮಾತಿಗಿಳಿಸಿ ವಿಷಯ ಗ್ರಹಿಸುತ್ತಿದ್ದರು. ಯಾವುದಾದರೂ ವಿಷಯದ ಬಗ್ಗೆ ಬರೆಯಬಹುದೆನಿಸಿದ ಕೂಡಲೇ ಜೇಬಿನಲ್ಲಿರುತ್ತಿದ್ದ ಸಣ್ಣ ಪುಸ್ತಕವೊಂದರಲ್ಲಿ ವಿಷಯ ಗುರುತು ಮಾಡಿಕೊಳ್ಳುತ್ತಿದ್ದರು. ಅನಂತರ ಅವರ ಚಡಪಡಿಕೆ ಆರಂಭ. ವಿಷಯವನ್ನು ಬೆಳೆಸುವ ಬಗ್ಗೆ, ಮುಕ್ತಾಯಗೊಳಿಸುವ ಬಗ್ಗೆ ಪ್ರಸ್ತಾವನೆ ಮಾಡುವ ಬಗ್ಗೆ ಚಿಂತನೆ ಆರಂಭಿಸುತ್ತಿದ್ದರು. ವಿಷಯವೇನಾದರೂ ಬೆಳೆಯುತ್ತಾ ಹೋಗಿ ದೊಡ್ಡ ಪುಸ್ತಕ ವಾಗುತ್ತದೆ ಎಂದಾದರೆ ಅದಕ್ಕಾಗಿ ಅಧ್ಯಯನ ಮಾಡುತ್ತಿದ್ದರು. ಶಿಕ್ಷಕರಾದ ಅವರಿಗೆ ಶಾಲೆಗೆ ವರ್ಷಕ್ಕೆರಡು ಬಾರಿ ದೀರ್ಘಾವಧಿ ರಜೆ ಬಂದಾಗ ಆ ಲೇಖನಕ್ಕೆ ತೊಡಗುತ್ತಿದ್ದರು. ಏಕಾಂತ ಬಯಸಿ ಮೈಸೂರಿನ 'ಧ್ವನ್ಯಾಲೋಕ', ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್‌ನ ಕಟ್ಟಡ, ಹೀಗೆ ಎಲ್ಲಾದರೊಂದುಕಡೆ ವಾರಗಟ್ಟಲೆ ಕುಳಿತು ಸಾಹಿತ್ಯ ರಚನೆ ಮಾಡುತ್ತಿದ್ದರು. ಆ ಸಮಯದಲ್ಲಿ ಹತ್ತಿರವಿದ್ದವರು ಊಟ ತಿಂಡಿಗೆ ಜ್ಞಾಪಿಸಿದಲ್ಲಿ ಮಾತ್ರ ಅದರ ಕಡೆಗೆ ಗಮನ, ಉಳಿದಂತೆ ಲೇಖನದಲ್ಲಿ ಮುಳುಗುತ್ತಿದ್ದರು.

ಯಾವುದೇ ಪ್ರಸಿದ್ಧ ವ್ಯಕ್ತಿಯ ಹಿಂದೆ ಒಂದು ಸ್ತ್ರೀ ಶಕ್ತಿ ಇರುತ್ತದೆ ಎಂಬ ಮಾತು ಶ್ರೀ ರಸಿಕ ಪುತ್ತಿಗೆಯವರ ಜೀವನದಲ್ಲೂ

ನಿಜವೇ ಆಗಿದೆ. ಧರ್ಮಪತ್ನಿ ಶ್ರೀಮತಿ ಪ್ರೇಮಲತಾ ಇವರ ಲೇಖನದ ಮೊದಲ ವಾಚಕಿ. ಸುಂದರ ಬರವಣಿಗೆಯ ಅವರು ರಸಿಕ ಪುತ್ತಿಗೆಯವರ ಕೋಳಿ ಕಾಲಿನ ಅಕ್ಷರವನ್ನು ಅರ್ಥಮಾಡಿಕೊಂಡು ಶುದ್ಧ ಹಸ್ತಪ್ರತಿ ತಯಾರಿಸುತ್ತಿದ್ದರು. ಹೀಗೆ ತಯಾರಿಸುವಾಗ ಬಂದ ಅನುಮಾನಗಳನ್ನು ಪರಿಹರಿಸಿಕೊಳ್ಳಲು ಚರ್ಚಿಸುತ್ತಿದ್ದರು. ಹೀಗಾಗಿ ಪುಸ್ತಕ ಪ್ರಕಟವಾಗಿ ಓದುಗ ವ್ಯಕ್ತಪಡಿಸಬಹುದಾದ ಅಭಿಪ್ರಾಯಗಳು ಪ್ರಕಟಣೆಗೆ ಪೂರ್ವದಲ್ಲೇ ಲಭಿಸಿ ಪ್ರಕಟಣೆಗೆ ಹೋಗುವಾಗ ಸರ್ವಾಂಗ ಸುಂದರವಾಗಲು ಸಹಕಾರಿಯಾಗುತ್ತಿತ್ತು. ಶ್ರೀಮತಿ ಪ್ರೇಮಲತಾರವರೂ ಸಹ ಶಿಕ್ಷಕಿಯಾದ್ದರಿಂದ ರಸಿಕ ಪುತ್ತಿಗೆಯವರಿಗೆ ಸರಿಯಾದ ಜೋಡಿಯಾಗಿ, ಎಲೆಮರೆ ಕಾಯಿಯಾಗಿ ಕೆಲಸ ನಿರ್ವಹಿಸುತ್ತಿದ್ದರು.

ರಸಿಕ ಪುತ್ತಿಗೆಯವರು ಕೇವಲ ಕಥೆ, ಕಾದಂಬರಿ ಬರೆಯುತ್ತಾ ಕುಳಿತವರಲ್ಲ. ಅನೇಕ ಪತ್ರಿಕೆಗಳಿಗೆ ಅವರು 'ಕಾಲಂ' ಗಳನ್ನು ಬರೆಯುತ್ತಿದ್ದರು. ಹಾಗಾಗಿ ಅವರು ಎಲ್ಲ ವಿಷಯಗಳನ್ನೂ ಚಿಕಿತ್ಸಕ ದೃಷ್ಟಿಯಿಂದ ನೋಡುತ್ತಿದ್ದರು. ಕಾಲಂ ಬರೆಯಲು ಒಪ್ಪಿದ ಮೇಲೆ ನಿಯಮಿತವಾಗಿ ಬರೆಯುವುದು, ವಿಷಯ ಸಂಗ್ರಹಿಸುವುದು ಅನಿವಾರ್ಯವಾದ್ದರಿಂದ ಅವರು ನಿರಂತರ ಚಿಂತಕರಾಗಿದ್ದರು. ವಿಷಯಗಳು ಹೊಳೆದ ಕೂಡಲೇ ಹೊತ್ತಿನ ಪರಿವೆಯಿಲ್ಲದೆ ಲೇಖನ ತಯಾರಾಗುತ್ತಿತ್ತು ಆದರೆ ತುರ್ತು ಎಂದು ಏನೋ ಒಂದು ಗೀಚುವ ಪ್ರವೃತ್ತಿ ಅವರದ್ದಾಗಿರಲಿಲ್ಲ. ಬರವಣಿಗೆ ಓದಿದವನು ಸ್ವಲ್ಪವಾದರೂ ಚಿಂತಿಸುವಂತಾಗಬೇಕು ಎಂಬುದು ಅವರ ನಂಬಿಕೆ. ಹೀಗಾಗಿಯೆ ಅವರ ಬರವಣಿಗೆ ಎಂದೆಗೂ ಚಿಂತನಾರ್ಹವೇ,

ಮಕ್ಕಳ ಸಾಹಿತಿಗೆ ನಿಜವಾಗಿಯೂ ಮಕ್ಕಳೆಂದರೆ ಪ್ರಾಣ. ಅವರು ನಿಧನರಾಗುವವೇಳೆಗೆ ಅವರಿಗೆ 5 ಜನ ಮೊಮ್ಮಕ್ಕಳು. 11 ವರ್ಷದ ದೊಡ್ಡ ಮೊಮ್ಮಗಳಿಂದ 1 ವರ್ಷದ ಕಿರಿಯ ಮೊಮ್ಮಗ.

ಈ ಮಕ್ಕಳೊಂದಿಗಿನ ಅವರ ಪ್ರೀತಿ ಸ್ಮರಣೀಯ. ಮಕ್ಕಳಿಗೂ 'ತಾತನ' ಹಂಬಲ, ತಾತ ಕವಿಯಾಗಿದ್ದರಿಂದ ಮೊಮ್ಮಕ್ಕಳೊಂದಿಗೆ ಕವಿತೆ ಕಟ್ಟಿ ಹಾಡಿ, ಹಾಡಿಸಿ ನಲಿಯುತ್ತಿದ್ದ ದೃಶ್ಯ ಅವಿಸ್ಮರಣೀಯ ಕೇವಲ ತಮ್ಮ ಮಕ್ಕಳು–ಮೊಮ್ಮಕ್ಕಳು ಮಾತ್ರವಲ್ಲ, ಅವರ ಸಂಪರ್ಕಕ್ಕೆ ಬಂದ ಯಾವುದೇ ಮಕ್ಕಳೂ ಅವರ ಆತ್ಮೀಯ ಕೂಟದ ಸದಸ್ಯರಾಗುತ್ತಿದ್ದರು.

ಇಂತಹ ಅವಿಸ್ಮರಣೀಯ ಸಾಹಿತಿ ಇಂದು ನಮ್ಮೊಂದಿಗಿಲ್ಲ. ಆದರೆ ಸಾಹಿತಿ ಸಾಯುವುದಿಲ್ಲ. ಆತನ ಬರಹಗಳ ಮೂಲಕ ಆತ ಎಂದೆಂದಿಗೂ ಅಜರಾಮರ. ಅಂತೆಯೇ ಶ್ರೀ ರಸಿಕ ಪುತ್ತಿಗೆ ಇಂದು ಅವರ ಪ್ರಕಟಿತ ಸಾಹಿತ್ಯದೊಂದಿಗೆ ಉಳಿದಿದ್ದಾರೆ. ಅವುಗಳನ್ನು ಓದಿದಾಗಲೆಲ್ಲಾ ಜೊತೆಯಲ್ಲೇ ಇರುತ್ತಾರೆ. ■

ಮಲ್ಲಾರಿ ಅವರ ಕಥೆಗಳು

— ಬಿಜರ್ಗ

ಅಸಾಂಗತ್ಯ ಶಿಷ್ಟ ಸಾಹಿತ್ಯದಲ್ಲಿ ಒಂದು ಸ್ಥಾನ ಪಡೆದು ಅಭಿವ್ಯಕ್ತಿಯು ಬಗೆಯಾದುದನ್ನು ನಾವು ನೋಡಿದ್ದೇವೆ. ಮಕ್ಕಳ ಕತೆಗಳಲ್ಲಿ ಅವಾಸ್ತವತೆ "ಫ್ಯಾಂಟಸಿ"ಯು ರೂಪದಲ್ಲಿ ತನ್ನ ತಾನೇ ಬರುವುದಾಗಿದೆ "ವ್ಯಾಕಿ ವೆನಸ್ಡೆ" ಎನ್ನುವ ಒಂದು ಇಂಗ್ಲೀಷ್ ಪುಸ್ತಕದಲ್ಲಿ ಇಂಥದೊಂದು ಮೋಜಿನ ಪ್ರಸಂಗವೇ ಇದೆ. ಹುಡಗನೊಬ್ಬ ಒಂದು ಬೆಳಗು ಎದ್ದಾಗ ಛಾವಣಿಗೆ ತನ್ನ ಬೂಟು ಅಂಟಿಕೊಂಡದ್ದನ್ನ ನೋಡುತ್ತಾನೆ. ಕಿಟಕಿಯಿಂದ ಹೊರಗೆ ಹಣಕಿ ಹಾಕಿದರೆ ಸೇಬು ಹಣ್ಣಿನ ಗಿಡದಲ್ಲಿ ಬಾಳೆಯ ಹಣ್ಣುಗಳಾಗಿವೆ, ಅವೂ ತಿರುಗು ಮುರುಗಾಗಿ. ಸ್ನಾನದ ಮನೆಯಲ್ಲಿ ನೀರಿನ ನಳದ ತಲೆ ಕೆಳಗೆ, ಕನ್ನಡಿ ತಿರುಗು, ಆ ಬುಧವಾರವೆಲ್ಲ ಅವನಿಗೆ ಹೀಗೇ ಕಾಣುತ್ತದೆ. ಮಕ್ಕಳಂತೂ ಈ ಪುಸ್ತಕವನ್ನು ಖುಷಿಯಿಂದ ಅನುಭವಿಸುತ್ತಾರೆ. ಇಂಥವೇ ಒಂದು ಕತೆ ಮಲ್ಲಾರಿಯವರು ಬರೆದಿದ್ದಾರೆ. ಅದಕ್ಕೆ "ತಿರುವು ಮುರುವು" ಎಂದೇ ಅವರು ಹೆಸರು ಕೊಟ್ಟಿದ್ದಾರೆ. ಅದರಲ್ಲಿ ಹುಡುಗನೊಬ್ಬ, ಕಿಟ್ಟು ಅವನ ಹೆಸರು, ಯಾರೋ ಅಚಾತುರ್ಯದಿಂದ ಹರಿದು ಹಾಕಿದ, ತನ್ನ ಮೆಚ್ಚಿನ ಚಿತ್ರ ಒಂದನ್ನ ಕೂಡಿಸತೊಡಗುತ್ತಾನೆ. ಚಿತ್ರ ಒಂದಷ್ಟು ಹೆಚ್ಚಿಗೆಯೇ ಉದ್ದ ಇದ್ದ ಗೋಣು, ಆ ಕಡೆ ಈ ಕಡೆ ಹೊರಳಿಸಿಟ್ಟ ಪಾದಗಳು. ಬಡಕಾದ ದೇಹ ಇಂಥ ಲಕ್ಷಣದ ಮನುಷ್ಯನದು. ಕಿಟ್ಟುವಿಗೆ ಇದು ಮೋಜಾಗಿ ಕಂಡಿದೆ. ಹರಿದ ಚೂರುಗಳನ್ನು ರಟ್ಟಿನ ಮೇಲೆ ಸರಿಯಾಗಿ ಹಚ್ಚಲು ಪರದಾಡುತ್ತಾನೆ. ಸಾಧ್ಯವಾಗುತ್ತಿಲ್ಲ. ಅಂತೂ ಕಷ್ಟಪಟ್ಟು ಹೇಗೆಹೇಗೊ ಅಂಟಿಸಿ, ಕೊನೆಗೆ ಬೂಟೊಂದು ಹಾಗೇ

ಉಳಿದುಬಿಡುತ್ತದೆ. ಅದನ್ನು ಎಲ್ಲಿ ಅಂಟಿಸಬೇಕೆಂದೇ ತೋಚುತ್ತಿಲ್ಲ. ಆಗ ಆ ಚಿತ್ರದ ಮನುಷ್ಯ ಮಾತನಾಡತೊಡಗಿ, ಬೂಟನ್ನು ಬೇಗ ತೊಡಿಸು ಎನ್ನುತ್ತಾನೆ. ಕಿಟ್ಟು ಗಾಬರಿಯಾಗಿ ಎಲ್ಲಿ, ಹೇಗೆ ತೊಡಸಬೇಕು ಎಂದು ತೋಚದೆ ಎಲ್ಲಿಯೋ ಅಂಟಿಸಿಬಿಡುತ್ತಾನೆ. ಅವನು ತೊಡಿಸಿದ್ದು ಆ ಮನುಷ್ಯನ ಕೈಗೆ. ಆ ಮನುಷ್ಯ ನಂತರ ಎದ್ದು ತಮ್ಮ ಮನೆಗೆ ಬರುತ್ತೀಯಾ ಎಂದು ಕರೆಯುತ್ತಾನೆ. ಕಿಟ್ಟು ಅವನೊಡನೆ ನಡೆಯುತ್ತಾನೆ. ಆಟದ ಕಪಾಟಿನೊಳಗಿಂದ ಅವರು ವಿಚಿತ್ರ ಲೋಕಕ್ಕೆ ಪ್ರವೇಶ ಪಡೆಯುತ್ತಾರೆ. ಅಲ್ಲಿ ಅವನಿಗೆ ಎದುರಾದವುಗಳೆಲ್ಲ ಮೋಜಿನ ಸಂಗತಿಗಳೇ. ಭೂಮಿಯ ಮೇಲೆ ಫಳ ಫಳ ಹೊಳೆಯುವ ಸೂರ್ಯ, ಬುಡಮೇಲು ಗಿಡಗಳು. ಆ ಮೇಲೆ ಅವರು ಮನೆ ತಲುಪುತ್ತಾರೆ. ಬಾಗಿಲಿಗೆ ಬರುವ ಬದಲು ಹೊಗೆ ಕಿಂಡಿಗೆ ಎದುರಾಗುತ್ತಾರೆ. ಹೀಗೆ ಎಲ್ಲೆಡೆ ಚಿತ್ರ ವಿಚಿತ್ರವೇ ಆಗಿ ಗೋಳಿಡುವ ಆ ಮನುಷ್ಯನನ್ನು ನೋಡಿದ ಕಿಟ್ಟು-ತಾನೇ ಅವನನ್ನು ಹೀಗೆಲ್ಲ ಮಾಡಿದ್ದೀನಲ್ಲಾ ಎಂದು ಹೌಹಾರುತ್ತಾನೆ. ಎಲ್ಲೆಲ್ಲೊ ಏನೇನೋ ಅಂಟಿಸಿ ಹೇಗೋ ಮಾಡಿಬಿಟ್ಟುದಕ್ಕೆ ಕನಿಕರ ಪಡುತ್ತಾನೆ. ಒಂದೇ ಕಾಲಲ್ಲಿ ಬೂಟಾಗಿ ಕುಂಟುತ್ತಿರುವುದನ್ನು ಗಮನಿಸುತ್ತಾನೆ. ನಂತರ ಮನೆಗೆ ಹೋಗಿ ಸರಿಯಾಗಿ ಅಂಟಿಸುವ ಮಾತು ಕೊಡುತ್ತಾನೆ.

ಆ ಮೋಜಿನ ಮನುಷ್ಯನಿಗೆ ಸಂತೋಷವಾಗುತ್ತದೆ. ನಂತರ ಹೀಗೆಯೇ ಚಿತ್ರವಿಚಿತ್ರವಾದ ದೊರೆಸಾನಿಯೊಬ್ಬಳ ಕುದುರೆ ಗಾಡಿ ಬರುತ್ತದೆ. ಕಿಟ್ಟು ಅದರಲ್ಲಿ ಕುಳಿತು. ದಾರಿಯಲ್ಲೇ ಅದರಿಂದ ಜಿಗಿದು, ತನ್ನ ಆಟಿಕೆಯ ಕಪಾಟಿನ ಬಾಗಿಲಿನಿಂದ ಹೊರಬರುತ್ತಾನೆ. ಮೋಜಿನ ಮನುಷ್ಯನನ್ನು ಸರಿಯಾಗಿ ಜೋಡಿಸಲು ಮತ್ತೆ ತೊಡಗಿಕೊಳ್ಳುತ್ತಾನೆ. ಆಲೈಸ್ ಇನ್ ವಂಡರ್ ಲ್ಯಾಂಡ್ ತರಹವೇ ಅನಿಸುವ ಈ ಕತೆ ಮಲ್ಲಾರಿಯವರದೇ ಆಗಿರುವುದಕ್ಕೆ ಕೆಲ ವಿಶೇಷಗಳಿವೆ. ಇಲ್ಲಿ ಬರುವ ಮೋಜಿನ ಸಂಗತಿಗಳು ಅಸಾಂಗತ್ಯವಾಗಿದ್ದುದರಿಂದ ಮೋಜಿನ ಸಂಗತಿಗಳಾಗದೆ, ಹುಡುಗ ಕನಿಕರ ಪಡುವಂತೆ ಮಾಡಿ ಮತ್ತೆ ಸರಿಪಡಿಸಲು

ಬಯಸುವಂತೆ ಮಾಡುತ್ತವೆ. ಇದು ಕೊನೆಯ ಪಕ್ಷ ಮನುಷ್ಯನ ಬಗೆಗಾದರೂ ಸ್ಪಷ್ಟವಾಗಿ ಕಾಣುತ್ತದೆ. ಮಕ್ಕಳಿಗೆ ಅವಾಸ್ತವ ಸಂಗತಿಗಳು ಆಕರ್ಷಿಸುವುದು ತೀರ ಸಹಜವಾಗಿ ಮಲ್ಲಾರಿ ಅವರ ಕತೆಯಲ್ಲಿ ಮನುಷ್ಯನಲ್ಲಿಯೇ ಕೆಟ್ಟತನವನ್ನು ಹೇಳುವ ಅಂಶ ಸ್ಪಷ್ಟವಾಗಿಯೇ ಹೇಳಲ್ಪಟ್ಟಿದೆ: ವಿಚಿತ್ರ ವ್ಯಕ್ತಿ ಮನುಷ್ಯರನ್ನು ಇದಕ್ಕಾಗಿ ದೂರುತ್ತಾನೆ ಅದಕ್ಕಾಗಿಯೇ ಅವಾಸ್ತವದ ಹಂದರದ ಬಳಕೆಯಾಗಿದ್ದರೂ, ಮಕ್ಕಳಲ್ಲಿ ಕುತೂಹಲ ಹುಟ್ಟಿಸುವುದಕ್ಕೆ, ರಂಜಿಸುವುದಕ್ಕೆ ಈ ವಾಸ್ತವವನ್ನ ಮಲ್ಲಾರಿ ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಾರೆ. ಕತೆಗಾರರಾದಿ ಮಲ್ಲಾರಿಯವರ ಬರಹದ ವಿಶೇಷ ಇಂಥಲ್ಲಿ ಎದ್ದು ಕಾಣುತ್ತದೆ.

೧೯೭೦ನೆಯ ದಶಕದ ಕೊನೆ ೧೯೮೦ರ ದಶಕದ ಮೊದಲಲ್ಲಿ ಮೇವುಂಡಿ ಮಲ್ಲಾರಿ ಕತೆಗಳನ್ನು ಬರೆದವರು. ಮಕ್ಕಳ ಸಾಹಿತ್ಯ ಕನ್ನಡದಲ್ಲಿ ರೂಪುಗೊಳ್ಳುತ್ತಿದ್ದು, ಕೆಲ ವಿಶೇಷ ಬರವಣಿಗೆಯ ಕಾಲ ಅದು. ತಾವೇ ಸಿದ್ಧಗೊಳ್ಳುತ್ತಿದ್ದ ಕಾಲ, ಮಾದರಿಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದ ಕಾಲ ಎಂದರೆ ತಪ್ಪಾಗದು. ಮೇವುಂಡಿ ಅವರ ಬರವಣಿಗೆ ಈ ನಿಟ್ಟಿನಲ್ಲಿ ಅವರದೇ ಆದ ಕೆಲ ವಿಶೇಷ ಪ್ರಯತ್ನಗಳನ್ನು ಹೇಳುತ್ತದೆ.

ಅವರ ಕತೆಗಳು ಆಕರ್ಷಿಸುವುದು ಮಕ್ಕಳೇ ಆಸೆ ಪಟ್ಟು ಕೇಳುವಂತಹ ಸಂಗತಿಗಳನ್ನು ಆಸಕ್ತಿಯಿಂದ ಹೇಳುವುದಕ್ಕೆ. ಅವರ ಕೆಲ ಕತೆಗಳಂತೂ ಮಕ್ಕಳ ಕತೆಗಳಾಗಿ ತನ್ನ ತಾನೇ ಅನನ್ಯವಾಗಿವೆ. ತೀರ ಚಿಕ್ಕದಾದರೂ "ಹೊಟ್ಟೆಡುಮ್ಮ" ಅಂಥದೊಂದು. ಅದರಲ್ಲಿ ಚಿತ್ರ ಬರೆಯುವ ಗೀಳಿನ ಹುಡುಗನೊಬ್ಬ ತನ್ನ ಅಜ್ಜನ ಚಿತ್ರ ತನಗೆ ಹೇಗೆಬೇಕೊ ಹಾಗೆ ಕೀಟಲೆಯಿಂದ ಬರೆಯುತ್ತಾನೆ; ಅಜ್ಜನ ಮುಂದೆ ಹಿಡಿಯುತ್ತಾನೆ. ಅಜ್ಜನಿಗೆ ಈ ಚಿತ್ರ ತನ್ನದೇ ಎಂದು ತಿಳಿಯುವುದಾದರೂ ಹೇಗೆ ? ಅದಕ್ಕೆ, ಅದರಲ್ಲಿನ ಅಗಲವಾದ ಮೋರೆ ಅಜ್ಜ ಸಣ್ಣವನಿದ್ದಾಗ ಅವನಪ್ಪ ಕಿವಿ ಹಿಡಿದು ಜಗ್ಗುತ್ತಿದ್ದುದಕ್ಕೆ ಆಗಿದ್ದು, ಕಣ್ಣು ಕಾಣಿಸದಿರುವುದಕ್ಕೆ ಚಾಳೀಸು, ಜಡ್ಡಾಗಿ ಸೊರಗಿರುವುದರಿಂದ ಕಡ್ಡಿಯಂಥ

ಕಾಲುಕ್ಕೈ, ಹೀಗೆ ತಾನೇ ಸಮಾಜಾಯಿಸಿ ತನ್ನ ಚಿತ್ರವನ್ನು ಸಮರ್ಥಿಸಿ ಕೊಳ್ಳುತ್ತ ಹೋಗುತ್ತಾನೆ.

"ಗುಬ್ಬಚ್ಚಿಗೂಡು" ಕತೆಯಲ್ಲಿ ಮುದ್ದಮ್ಮ ತನ್ನ ಚಾಳಿಸು ಕಳೆದುಕೊಂಡು ಹುಡುಕಾಡುತ್ತಾಳೆ. ಕೊನೆಗೆ ಗುಬ್ಬಿಯೊಂದು ಅವಳ ಚಾಳೀಸನ್ನ ತನ್ನ ಹೊಸ ಮನೆಯ ಕಿಟಕಿ ಮಾಡಿದುದನ್ನ ನೋಡಿ, ಮರಳಿ ಕೇಳಲಾರದೆ ಹಾಗೆ ಬರುತ್ತಾಳೆ. ಕತೆಯುದ್ದಕ್ಕೂ ಮಕ್ಕಳ ಮನಸ್ಸಿನ್ನ ಹಿಡಿದಿಡುವ ಸಹಜದ ಅವರಣ ನಿರ್ಮಿಸಿರುವುದು ವಿಶೇಷ ವಾಗಿದೆ, ಚಾಳೀಸು ಹುಡುಕತೊಡಗಿದಾಗ "ಅವ್ವಾ ಅವ್ವಾ, ನಾನು ಗೊಂಬೀ ಬರದೀನಿ, ನೋಡು, ಎಂಥಾ ಚೆಂದ ಬರೆದೀನಿ" ಎಂದು ಕಪ್ಪುರ ಕನಕ ಬಂದರೆ, ಕಾಜಿನಕಾಶಿ "ಅವ್ವಾ ಅವ್ವಾ, ಇದು ನೋಡು ಹೊಸ ಪುಸ್ತಕ" ಎನ್ನುತ್ತಾಳೆ. ಕಿಟ್ಟದ ಕಿಟ್ಟದ "ಅವ್ವಾ ಇಲ್ಲಿ ನೋಡು ಬಣ್ಣದ ಗುಬ್ಬಿ ತಂದೆ" ಎಂದಳು. ಲಟುಪುಟು ಪುಟ್ಟ ಪಾಟಿಯಲ್ಲಿ "ಲ" ಬರೆದುದನ್ನ ತೋರಿಸಲು ಬಂದ. ಯಾವುದನ್ನೂ ನೋಡಲಾಗದೆ ಹಳಹಳಿಸುತ್ತ ಮುದ್ದಮ್ಮ ಹಣ್ಣಿನ ಅಂಗಡಿ ಚೆಂಡಮ್ಮನ ಬಳಿಗೆ ಬಂದಳು ಅವಳು ಚಾಳೀಸನ್ನ, "ಮೇಲಿನದು ಒಗೆ, ಒಳಗಿನದು ತಿನ್ನು" ಎನ್ನುವ ಬಾಳೆ ಹಣ್ಣಿನಲ್ಲಿ, "ಮೇಲಿನದು ಒಗೆ, ಒಳಗಿನದು ಒಗೆ, ನಡುವಿನದು ತಿನ್ನು" ಎನ್ನುವ ಮಾವಿನ ಹಣ್ಣಿನಲ್ಲಿ, "ಎಲ್ಲಾ ತಿನ್ನು" ಎನ್ನುವ ಪೇರಲ ಹಣ್ಣಿನ ನಡುವೆ ಹುಡುಕಿ ಸಿಗಲಿಲ್ಲ ಎಂದಳಂತೆ, ಮುದ್ದಮ್ಮ ಅಲ್ಲಿಂದ ಅರಿವೆ ಅಂಗಡಿಯವನ ಬಳಿಗೆ ಹೋದಳು. ಅವನು "ಉಡು", "ಹೊದೆ", "ಹಾಸು", "ಹೊಲಿದು ತೊಡು" ಎನ್ನುವ ಅರಿವೆಗಳಲ್ಲಿ ಹುಡುಕಿದನು, ಅಲ್ಲಿಯೂ ಸಿಗಲಿಲ್ಲ. ಕೊನೆಗೆ 'ಚಿಂವ್ ಚಿಂವ್ ನೋಡುಬಾ, ನಾನು ಒಂದು ಹೊಸ ಮನೆಕಟ್ಟಿದ್ದೇನೆ, ಆದರ ಕಿಡಕಿಗೆ ಹಚ್ಚಲಿಕ್ಕೆ ಈವೊತ್ತೇ ಮುಂಜಾನೆ ಕಾಜಿನ ಕಿಡಕಿ ಸಿಕ್ಕವು' ಎಂದು ಗುಬ್ಬಿ ಕರೆಯಿತು ನೋಡಲು ಹೋದರೆ ತನ್ನ ಚಾಳೀಸು ಅಲ್ಲಿದೆ.

ಚಾಳೀಸೆಂದು ತಿಳಿಯದೆ ತಂದಿಟ್ಟುಕೊಂಡ ಗುಬ್ಬಿಯಿಂದ ತಿರುಗಿ ಇಸಿದುಕೊಳ್ಳಲಾರದೆ ಮುದ್ದಮ್ಮ "ಗುಬ್ಬಚ್ಚೀ ನಿನ್ನ ಮನೆ ಚೆನ್ನಾಗಿದೆ"

ಎಂದು ಹೇಳಿ ತಿರುಗಿ ಬರುತ್ತಾಳೆ. ಕತೆ ಹೇಳುವುದನ್ನೇ ಬರವಣಿಗೆಯಾಗಿ ಮಾಡಲಾಗಿದೆ. ಹೀಗೆಯೇ ಇನ್ನೊಂದು ಕತೆಯಲ್ಲಿ ಮುದ್ದಮ್ಮ ಆಟದ ಮೋಜನ್ನು ಮಾಡಬೇಕೆಂದು ಜತನದಿಂದ ಕೂಡಿಟ್ಟ ಖಾಲಿ ಕಡ್ಡಿ ಪೆಟ್ಟಿಗೆಗಳು ಕಾಣದಾಗಿ ಹುಡುಕುತ್ತ ಹೋಗಿ ಮಾವಿನ ಮರದ ಕೆಳಗೆ ಆ ಪೆಟ್ಟಿಗೆಗಳೆಲ್ಲ ರೈಲುಗಾಡಿಗಳಾಗಿ ಹೊರಟುದನ್ನ ನೋಡುತ್ತಾಳೆ. ಎಮ್ಮೆಗೊಡ್ಡುಗಳು, ಹಸಿರು ಬೋರಂಗಿಗಳು. ಜಿಟ್ಟೆಗಳು ಅದರಲ್ಲಿನ ಪ್ರಯಾಣಿಕರು. ಜಿಟ್ಟೆ ಬೆನಕವು ಗಾಡಿಯನ್ನ ಎಳೆಯುತ್ತಿತ್ತು. ಇದನ್ನೆಲ್ಲ ಮಾಡಿದ್ದು ಗಿಣಿರಾಮ. ಮತ್ತೊಂದು ಕತೆಯಲ್ಲಿ ಮುದ್ದಮ್ಮ ತನ್ನ ಕೆಲಸದಲ್ಲಿ ಮೈಮರೆತು ಲುಟಪುಟು ಪುಟ್ಟನನ್ನೆ ಕಳೆದುಕೊಂಡುಬಿಡುತ್ತಾಳೆ. ದಾರಿಯಲ್ಲಿ ಮಂಗವೊಂದು ಕೋಡುಬಳೆ ನೀಡಿ ಅವಳಿಗೆ ಸಹಾಯ ಮಾಡುತ್ತದೆ.ಕೋಡುಬಳೆ ಉರುಳುತ್ತ ದಾರಿ ತೋರಿಸುತ್ತದೆ".ಗಾಳಿಯ ಹಾವಳಿ" ಕತೆಯಲ್ಲಿ ಮುದ್ದಮ್ಮ ಒಗೆದು ಒಣಗು ಹಾಕಿದ ಚಣ್ಣ, ಅಂಗಿ. ಗಾಂಧಿ ಟೊಪ್ಪಿಗೆ, ಲಂಗ ಎಲ್ಲ ಗಾಳಿಗೆ ಹಾರಿ ಹೋಗಿ ಗಿಳಿ, ಹುಂಜ, ಮಂಗ ಹೀಗೆ ಬೇರೆ ಬೇರೆ ಪ್ರಾಣಿಗಳಿಗೆ ಸಿಕ್ಕುಬಿಡುತ್ತವೆ. ಅವೆಲ್ಲ ಆಸೆಯಿಂದ ತೊಟ್ಟುಕೊಂಡಿರುವಾಗ ಮುದ್ದಮ್ಮನ ಮಕ್ಕಳು ಹುಡುಕುತ್ತ ಬರುತ್ತವೆ, ಕೊನೆಗೆ ಮುದ್ದಮ್ಮನ ತಿಳುವಳಿಕೆ ಮಾತಿನಿಂದ ಎಲ್ಲ ತಿರುಗಿ ಕೊಟ್ಟುಬಿಡುತ್ತವೆ. ಆದರೆ ಗಿಳಿಮರಿ ಬಹಳ ಚಿಕ್ಕದು ಕೊಡುವುದಕ್ಕೆ ಒಪ್ಪುವುದಿಲ್ಲ. ಅಳತೊಡಗಿತು, ಮುದ್ದಮ್ಮ "ಇರಲಿ ಮಗೂ" ಎಂದು ಕಸೂತಿಯ ಕುಪ್ಪಸ ಅದಕ್ಕೇ ಬಿಟ್ಟುಬಿಟ್ಟಳು.

ಹೀಗೆ ತಾವೇ ಕಟ್ಟಿ ಹೇಳಿದ ಕತೆಗಳಲ್ಲಿ ಮಲ್ಲಾರಿ ಅವರು ಬಳಸಿರುವ ಫ್ಯಾಂಟಸಿ ಸುತ್ತಲಿನ ಪರಿಸರದಲ್ಲಿಯೇ ಹುಟ್ಟುವಂಥದು. ಗ್ರಾಮೀಣ ಪರಿಸರದ ಮಕ್ಕಳಿಗೆ ಸಹಜವಾಗಿ ಹಿಡಿಸುವಂಥದು. "ಅದ್ಭುತ" ಎಂದು ಕರೆಯಲಾಗದ್ದು. ಈ ಕತೆಗಳೆಲ್ಲೆಲ್ಲೂ ಇಂಥದೊಂದು ಉದ್ದೇಶಕ್ಕಾಗಿ, ನೀತಿ ಹೇಳುವುದಕ್ಕಾಗಿ, ತಿದ್ದುವುದಕ್ಕಾಗಿ

ಅಂತ ತೋರಿಸದೆ, ಕತೆಯಾಗಿಯೇ ನೀಡುವುದು ವಿಶೇಷವಾಗಿದೆ. ಮಕ್ಕಳ ಮನಸ್ಸು ಬಯಸುವ ಸಂಗತಿಗಳಿಂದ ಕತೆ ಕಟ್ಟುವುದು ಇಲ್ಲೆಲ್ಲ ಕಾಣುತ್ತದೆ. ಈ ಕತೆ ಕಟ್ಟುವಿಕೆ ಮಲ್ಲಾರಿಯವರಲ್ಲಿ ಹಾಸ್ಯ, ತುಂಟತನಗಳನ್ನು ಹೆಚ್ಚು ಬಳಸಿಕೊಳ್ಳುತ್ತದೆ. ಆದರೆ ಎಲ್ಲ ಕತೆಗಳ ಹಿಂದೆಯೂ ಸಂವೇದನೆ ನೀಡುವ ಮಾನವೀಯ ಅಂಶವೊಂದು ತಟ್ಟುತ್ತದೆ,

ಇಂಥ ಕತೆಗಳಿಗೆ ಮಲ್ಲಾರಿ ಅವರು ಬಳಸುವ ಭಾಷೆ ಅವರ ಕತೆ ಹೇಳುವಿಕೆಗೆ ಪುಷ್ಟಿ ನೀಡುತ್ತದೆ. ಧಾರವಾಡ ಭಾಗದ ಆಡು ಭಾಷೆ ಯನ್ನು ಅದರ ಎಲ್ಲ ಸೊಗಡಿನೊಂದಿಗೆ, ಆದರೆ ಮಕ್ಕಳಿಗೆ ತಕ್ಕುದಾಗಿ ಬರವಣಿಗೆಗೆ ತಂದುಕೊಂಡಿದ್ದಾರೆ. ಮಕ್ಕಳು ಕತೆ ಓದುತ್ತ, ಮುದ್ರಿತ ಬರಹದ ಮಿತಿಗಳಲ್ಲೂ ಕತೆ ಆಲಿಸುವುದನ್ನು ಅನುಭವಿಸಬಹುದು. ಕತೆಗಳಲ್ಲಿ ಬಳಸುವ ಮೋಜಿನ ಹೆಸರುಗಳು ಮಕ್ಕಳೊಡನೆಯ ಮಲ್ಲಾರಿ ಯವರ ಅಕ್ಕರೆಯನ್ನು, ಸಲುಗೆತನವನ್ನು ಹೇಳುತ್ತವೆ,

ಹಿತೋಪದೇಶದ ಕತೆಗಳು, ಪಂಚ ತಂತ್ರದ ಕತೆಗಳು ಇವನ್ನೂ ಅವರು ಸಂಗ್ರಹಿಸಿದ್ದಾರೆ. ಇಂಥ ಕತೆಗಳನ್ನು ಸಂಗ್ರಹಿಸಿ ನೀಡುವಾಗ ಆಡು ಭಾಷೆಯ ಬನಿ, ಹತ್ತಿರದ ಸಂಗತಿಗಳು ಇಂಥವುಗಳಿಂದ ತಮ್ಮ ದನ್ನಾಗಿ ಮಾಡಿ ಹೇಳುತ್ತಾರೆ. "ಗೆಳೆಯ" ಪುಸ್ತಕ ಗೆಳೆತನಕ್ಕೆ ಸಂಬಂಧಿ ಸಿದ ಪ್ರಚಲಿತವಿರುವ ಅನೇಕ ಚಿಕ್ಕ ಚಿಕ್ಕ ಕಥೆಗಳನ್ನು ಒಂದರೊಳ ಗೊಂದರಂತೆ ಹೆಣೆದು ಒಂದೇ ಕತೆಯಾಗಿ ಮಾಡಿದ್ದಾರೆ. ಬಲೆಯಲ್ಲಿ ಬಿದ್ದ ಅಕ್ಕಿಕಾಳುಗಳನ್ನು ನೋಡಿ ತಿನ್ನಲು ಯೋಚಿಸಿದ ಪಾರಿವಾಳ ಗಳನ್ನು ತಡೆದು ಮುದುಕ ಪಾರಿವಾಳ ಕತೆ ಹೇಳತೊಡಗುತ್ತದೆ "ನಾನೊಮ್ಮೆ ಮಲೆನಾಡಿಗೆ ಹೋಗಿದ್ದ......"ಹೀಗೆ ದಾನ ಕೊಡುತ್ತೇ ನೆಂದ ಹುಲಿಯು ಬ್ರಾಹ್ಮಣನೊಬ್ಬನನ್ನು ನುಂಗಿ ಹಾಕಿದ ಹುಲಿಯ ಕತೆ ಹೇಳುತ್ತದೆ, ಅದನ್ನು ಕೇಳುವಂತೆ ಕೇಳಿ ಒಂದು ಪಾರಿ ವಾಳ ಸಂಕಟ ಬಂದಾಗ ಹಿರಿಯರ ಮಾತು; ತಿನ್ನುವುದಕ್ಕೂ ಅವ ರನ್ನು ಕೇಳುವುದೆ ? ನಡೆಯಿರಿ ಎಂದು ಎಲ್ಲರನ್ನು ಎಬ್ಬಿಸುತ್ತದೆ. ಅವು ಬಲೆಯಲ್ಲಿ ಸಿಕ್ಕಿಬೀಳುತ್ತವೆ.

ಮತ್ತೆ ಮುದುಕ ಪಾರಿವಾಳ ಸಲಹೆ ನೀಡಿ ಎಲ್ಲಾ ಬಲೆಯೊಂದಿಗೆ ಹಾರಿ ತಪ್ಪಿಸಿಕೊಳ್ಳುತ್ತವೆ. "ನನಗೆ ಒಬ್ಬ ಇಲಿಯಪ್ಪ ಗೆಳೆಯ ಇದ್ದಾನೆ" ಎಂದು ಬಲೆ ಕಡಿದು ಹಾಕಲು ಅತ್ತ ಕರೆದೊಯ್ಯುತ್ತದೆ ಮುದುಕ ಪಾರವಾಳ. ಹೀಗೆ ಅಂಕೋಲೆಯ ಹತ್ತಿರದ ಅಡವಿಯಲ್ಲಿಯ ಚಿಗರಿಯ ಕತೆ, ಮೋವುಂಡಿಯ ಹೊರಗೆ ಹುಣಸೀಮರದ ಹೊದಿರಿನಲ್ಲಿದ್ದ ಪದ್ದು ಮತ್ತು ಬೆಕ್ಕಮ್ಮನವರ ಕತೆ, ಹೀಗೆ ಕತೆಯ ಮೇಲೆ ಕತೆ ಸಾಗುತ್ತವೆ.

ಹೀಗೆ ಗೆಳೆತನದ ಬಗೆಗಿರುವ ಕತೆಗಳನ್ನು ಕೂಡಿ ಹಾಕಿರುವಾಗಲೂ ಕತೆ ಹೇಳುವುದರಲ್ಲಿ ಹಾಸ್ಯ, ತುಂಟತನ, ಮೋಜುಗಾರಿಕೆ ನಡುನಡುವ ಹಣಿಕಿ ಹಾಕುತ್ತಲೇ ಇರುತ್ತವೆ. ಬಲೆಯಲ್ಲಿ ಸಿಕ್ಕಿಬಿದ್ದ ಪಾರಿವಾಳಗಳು ಬಲೆಯನ್ನು ಕಡಿದು ಹಾಕಲು ಕೇಳಿಕೊಂಡ ಇಲಿಯಪ್ಪನ ಬಗೆಗೆ ಹೇಳುತ್ತ "ಯಾರಾದರೂ ಹಿಡಿಯ ಬಂದರೆ ಓಡಿ ಹೋಗುವದಕ್ಕೆಂದು ಆತನು ತನ್ನ ಮನೆಗೆ ನಾಲ್ಕು ಬಾಗಿಲು ಮಾಡಿಕೊಂಡಿದ್ದ" ಎನ್ನುತ್ತಾರೆ, ಕಾಗೆಯೊಂದು ಗೆಳೆತನ ಬೆಳೆಸಿ ಇಲಿಯಪ್ಪನ ಬಳಿಗೆ ಬಂದರೆ "ನಿನ್ನೊಂದಿಗೆ ಗೆಳೆತನ ಮಾಡಿದರೆ ಕೀರಿತು ಹಿಂದಕ್ಕೆ ನರಿಯು ಗೆಳೆತನ ಮಾಡಿ ಚಿಗರಿ ಬಲೆಗೆ ಬಿತ್ತು" ಎಂದು ಬಿಡುತ್ತದೆ.

ಎಂಥ ಕತೆಗಳನ್ನು ಆರಿಸಿಕೊಳ್ಳುತ್ತಾರೆ, ಹೇಗೆಲ್ಲಾ ಹೇಳುತ್ತಾರೆ ಮಲ್ಲಾರಿ ಎನ್ನುವುದಕ್ಕೆ "ಜಾಣಗುಂಬ್ಬಿ" ಅನ್ನುವ ಪುಸ್ತಕ ಒಂದು ಮಾದರಿ ಅನ್ನಬಹುದು. ಅದರಲ್ಲಿ ಮೂರು ಕತೆಗಳಿವೆ. ಅಲ್ಲಾಡಿ ಇಲ್ಲಾಡಿ ಬರುವ ಗುಬ್ಬಿ ತನ್ನದೊಂದು ಕಡಲೆಯ ಬದಲಿಗೆ ಒಂಬತ್ತು ಕುಕ್ಕಡಿ ನೂಲು, ಕಂಬೀದಟ್ಟಿ, ಟಗರು, ಆನೆ, ಕೊನೆಗೆ ಡೊಳ್ಳು ಪಡೆಯುವ ಕತೆ ಒಂದಾದರೆ, ಅಕ್ಕ, ತಮ್ಮ ತಾಯಿಯರಾಗಿ, ಪುಟ್ಟ ಕಿರಾಣಿ ಅಂಗಡಿಕಾರನಾಗಿ ಆಡುತ್ತ ಜಗಳಾಡಿ ಮತ್ತೆ ಕೂಡಿದ ಪ್ರಸಂಗ. ರಾಜ, ಅವನ ಮನೆಮಂದಿಯೆಲ್ಲರ ತಲೆ ಕೂದಲು ತೆಗೆಸಿ ಬೋಳು ಮಾಡಿದ ಮತ್ತೊಂದು ಗುಬ್ಬಿಯ ಕತೆ ಹೀಗೆ ಮೂರೂ ಕಥೆಗಳು ಹಾಸ್ಯವುಳ್ಳವು, ಕೀಟಲೆಯವು, ತುಂಟತನದವು. ಗುಬ್ಬಿಯಂಥ

ಸಣ್ಣ ಜೀವ ಏನೆಲ್ಲ ಮಾಡುವುದು, ದೊಡ್ಡ ದೊಡ್ಡ ಸವಾಲನ್ನೇ ಎದುರಿಸುವುದು. ಸಣ್ಣದೊಂದು ವ್ಯಂಗ್ಯದ ಎಳೆಯನ್ನೂ ಹೊತ್ತಿದೆ. ಗುಬ್ಬಿ ಮಲ್ಲಾರಿಯವರ ಕತೆಗಳಲ್ಲಿ ಬಹಳಷ್ಟು ಸಲ ಬಂದಿದೆ. ಒಂದು ಕಡಲೆ ಕಾಳಿಗಾಗಿ ಬಡಿಗ, ಆಕಳು, ಕರು. ಜೇಳು, ಗುಂಡಕಲ್ಲು ಎಲ್ಲರನ್ನೂ ಭೇಟಿಯಾಗುವ ಗುಬ್ಬಿಯ ಕಥಾನಕವನ್ನೂ ಅವರು ಬರೆದಿದ್ದಾರೆ. ಎಲ್ಲ ಕಡೆಗಳಲ್ಲೂ ಗುಬ್ಬಿ ತುಂಬಾ ಚಟುವಟಿಕೆಯದಾಗಿಯೇ ಕಾಣುತ್ತದೆ.

ಅವರ ಪೆದ್ದ ಸಪುರಿ. ಕತ್ತೆಯ ಮೇಳ, ತಾರೀಖು ಇಲ್ಲದ ದಿನಕ್ಕಾಗಿ ಕಾಯುತ್ತಿರುವ ಹಾವುರಾಣಿಗಳ "ಓತಿಕಾಟಿನ ತಂಗಿ" ಕತೆಗಳೂ ಇಂಥವೇ ಸಂಗತಿಗಳನ್ನು ಒಳಗೊಂಡಿವೆ. ಆದರೆ ಎಲ್ಲವರಲ್ಲೂ ಹಿಂದೆ ಮಾನವೀಯ ಅನುಕಂಪ ಮೆಲ್ಲಗೆ ತಟ್ಟುತ್ತದೆ.

ಹಿತೋಪದೇಶದಿಂದ "ಮಂಗ ಎಂದರೆ ಮಂಗ" ಎನ್ನುವ ಪುಸ್ತಕದಲ್ಲಿ ಆಯ್ದ ಕತೆಗಳೆಲ್ಲ, ಮಂಗ, ಕತ್ತೆ, ಇಲಿ, ಟಿಟ್ಟಿಭ ಹಕ್ಕಿ. ಒಂದು ಹಳ್ಳಿಯ ಜಾಣ ಮುದುಕಿ, ಹೀಗೆ ಕ್ಷುದ್ರ, ಸಣ್ಣ ಜೀವಗಳ ಸುತ್ತಲೆ ಇರುವಂಥವು. ಕೆಲವು ದೀರ್ಘವಾದ ಕತೆಗಳನ್ನು ಅವರು ಬರೆದಿದ್ದಾರೆ. ಚಿತ್ರವಿಚಿತ್ರವಾದ ಕಾನೂನು ಮಾಡಿಕೊಂಡಿದ್ದು ಅವಿವೇಕಿ ಅರಸು ಒಂದು ಗೋಡೆ ಬಿದ್ದುದಕ್ಕೆ ಶಿಕ್ಷೆಯಾಗಿ ತಾನೇ ಶೂಲಕ್ಕೇರಿ ಪ್ರಾಣ ಕಳೆದುಕೊಂಡ ಸಾಕಷ್ಟು ಪ್ರಚಲಿತವಾಗಿರುವ ಕತೆಯನ್ನ ಮಲ್ಲಾರಿಯವರು ವಿಸ್ತಾರವಾಗಿಯೇ ಮಾತು ಕತೆಗಳನ್ನು ಸಾಕಷ್ಟು ಹೊಸದು ಹೇಳಿರುವುದರಲ್ಲಿ ಅವರ ಕತೆಗಾರಿಕೆಯ ಸಹಜತೆಯೇ ಇದೆ. "ಬಂಗಾರದ ಕೂದಲಿನ ರಾಕ್ಷಸ" ಕಥೆಯಲ್ಲಿ ಭಯವನ್ನುಂಟು ಮಾಡುವ ರಾಕ್ಷಸನಿಂದಲೇ ಕಥಾನಾಯಕ ಯುವಕನಿಗೆ ಗುಟ್ಟುಗಳನ್ನೆಲ್ಲ ಬಯಲು ಮಾಡುವ ವಿಚಾರಗಳು ದೊರೆತುದು, ತನ್ನನ್ನು ಕೊಲ್ಲಲು ಮೊದಲಿನಿಂದಲೂ ಪ್ರಯತ್ನಿಸಿದ ರಾಜ ತಾನೇ ದೋಣಿ ನಡೆಸುವ ಶಿಕ್ಷೆಗೆ ಈಡಾಗುವುದು, ಒಂದಷ್ಟು ವಿಶೇಷಗಳೇ ಆಗಿವೆ. "ರೆಕ್ಕೆನಕ್ರಪ್ಪ" ಕತೆ

ಯಲ್ಲಿ ರೆಕ್ಕೆಯುಳ್ಳ ಮೊಸಳೆ ಅದೇ ಮನೆ. ಅದೇ ಸಾಮಾನುಗಳು ಎಂದು ಬೇಸರದಿಂದ ಎಲ್ಲವನ್ನೂ ತಾನೇ ಕೆಡವಿ ಪುಡಿ ಪುಡಿ ಮಾಡಿ ಹೊಟ್ಟೆ ಹಸಿದಾಗ ಆಹಾರಕ್ಕಾಗಿ ಹೊರಟು ದಾರಿಯಲ್ಲಿ ಕಂಡವರನ್ನ ಹೆದರಿಸುತ್ತ ಜೇನು, ರೊಟ್ಟಿ, ಬೆಣ್ಣೆ ಸಂಪಾದಿಸಿ ತಿಂದು ಒಂದು ಮನೆಯ ಮಾಳಿಗೆಯ ಮೇಲೆ ಮಲಗುತ್ತಾದೆ. ಮಂಚವಿಲ್ಲ, ಹಾಸಿಗೆಯಿಲ್ಲ, ಹೊದಿಕೆಯಿಲ್ಲ ಕಣ್ಣೀರು ಧೋರನೆ ಹರಿಯಿತು, ನೀರು ಕೆಳಗೆ ಮನೆಯಲ್ಲಿ ಬಿದ್ದು ಆ ಮನೆಯ ವಿಚಿತ್ರ ಮನುಷ್ಯ ಹೊರಗೆ ಬಂದ, ಎಲ್ಲರನ್ನೂ ಹೆದರಿಸಿ ಆಹಾರ ಸಂಪಾದಿಸಿದ್ದ ವಕ್ರಪ್ಪ ತಪ್ಪಾಯಿತು ಎನ್ನುತ್ತಾನೆ ಅವನಿಗೆ. ಅವ ಇವನ ಕಷ್ಟ ಅರಿತು ಬೇಕಾದಂಥ ಮನೆ ಹೊಂದಲು ಜಾದು ಹರಳು ಕೊಟ್ಟು ಕಳಿಸುತ್ತಾನೆ. “ಚಿಕ್ಕ ಹುಡುಗಿ ಪುಟ್ಟ ತಮ್ಮ” ಕತೆಯಲ್ಲಿ ಮಗುವನ್ನು ಕಾಯುತ್ತಿದ್ದ ಹುಡುಗ ಹಂಸಗಳು ಎತ್ತಿಕೊಂಡು ಹೋದಾಗ ಹುಡುಕುತ್ತ ಹೋಗುವ ಘಟನೆ ಇದೆ. ದಾರಿಯಲ್ಲಿ ಅಸಹಜವಾದ ಉದ್ದಿನ ದೋಸೆ ತಿನ್ನಲು ಹೇಳುವ ಹೆಂಗಸು, ಅತ್ತಿಯ ಹಣ್ಣು ತಿನ್ನು ಎನ್ನುವ ಮರ, ಕೆನೆ ತಿನ್ನು ಎನ್ನುವ ಹೊಳೆ ಎಲ್ಲವಕ್ಕೂ ನಕಾರ ಹೇಳಿ ಮಗುವನ್ನು ಪತ್ತೆ ಹಚ್ಚಿ, ಎತ್ತಿಕೊಂಡು ಬರುವಾಗ ಕೆನೆ, ಅತ್ತಿಯ ಹಣ್ಣು ಉದ್ದಿನ ದೋಸೆ ತಿಂದು ಅದರಿಂದ ರಕ್ಷಣೆ ಪಡೆದು ಬೆನ್ನು ಹತ್ತಿದ ಹಂಸಗಳಿಂದ ರಕ್ಷಣೆ ಪಡೆದು ಮನೆ ಸೇರುತ್ತಾಳೆ. ಇವಷ್ಟೇ ಕತೆಗಳನ್ನು ನೋಡುವಾಗ ಇಂಥ ಕತೆಗಳನ್ನೇ ಆರಿಸಿಕೊಳ್ಳುವುದರ ಹಿಂದಿನ ಮನೋಧರ್ಮ ಗುರುತಿಸುವುದು ಕಷ್ಟವಾಗುತ್ತದೆ. ಮಲ್ಲಾರಿಯವರ ಕತೆಗಾರಿಕೆಯ ದೀರ್ಘವಾದ ಪಳ್ಳಿಯ ಕತೆಗಳನ್ನು ಅವರು ಆಸಕ್ತಿಯಿಂದ ಮಕ್ಕಳಿಗೆ ಹೇಳಲು ಬಯಸಿದವರು ಎಂಬುದು ಮಾತ್ರ ಸ್ಪಷ್ಟವಾಗುತ್ತದೆ.

ಒಟ್ಟಾರೆ ಪೇಮಂಡಿ ಮಲ್ಲಾರಿ ಅವರ ಕತೆಯ ಬರವಣಿಗೆ ನೋಡಿದರೆ ಕತೆ ಹೇಳುವುದಕ್ಕೆ ಹತ್ತಿರವಾದ ಬರವಣಿಗೆ. ಆಡು ಮಾತಿನ ಸಹಜದ ಬಳಕೆ, ಹಾಸ್ಯ, ಕತೆಯ ಹಿಂದೆ ವ್ಯಕ್ತವಾಗುವ ಮಾನವೀಯ

ಅನುಕಂಪೆ, ಮಕ್ಕಳಿಗೆ ಕತೆ ಹೇಳುವುದಕ್ಕೆಂದೇ ಉದ್ದೇಶಪಟ್ಟು. ಕತೆಗಾರಿಕೆಯನ್ನು ಬರವಣಿಗೆಯ ಮಿತಿಯಲ್ಲಿ ಸಾಧ್ಯವಾದಷ್ಟು ತರುವುದು ಮುಂತಾಗಿ ವೈಶಿಷ್ಟ್ಯಗಳನ್ನು ಗುರುತಿಸಬಹುದು, ಅವರೇ ಕಲ್ಪಿಸಿ ರಚಿಸಿದ ಗೊಂಬಕ್ಕನ ಕಥೆಯಂಥವೇ ಹೆಚ್ಚು ಖುಷಿ ಕೊಡುತ್ತವೆ ಎನ್ನುವುದನ್ನೂ ಹೇಳಬೇಕು. □

ಆ್ಯಂಟನ್ ಚೆಕಾವ್‌ರ 'ಕಷ್ಟಾಂಕ'
ಒಂದು ಪರಿಚಯ

— ರಾಜಶೇಖರ ಪಾಟೀಲ ಹತಗುಂದಿ

ಆ್ಯಂಟನ್ ಚೆಕೋವ್ ರಷಿಯಾದ ಪ್ರತಿಭಾನ್ವಿತ ಲೇಖಕ. ಕತೆ, ನಾಟಕಗಳಲ್ಲಿ ಅವರದು ಅಸಾಧಾರಣ ಕೊಡುಗೆ. ರಷಿಯಾದ ಇನ್ನೋರ್ವ ಉದ್ದಾಮ ಸಾಹಿತಿ ಟಾಲ್‌ಸ್ಟಾಯ್‌ರಂತೆ ಚೆಕೋವ್ ಕೂಡ ಮಕ್ಕಳಿಗಾಗಿಯೂ ಬರೆದುದು ವಿಶೇಷವಾಗಿದೆ. ಮಕ್ಕಳಿಗಾಗಿ ರಚಿಸುವುದೆಂದರೆ ಪ್ರೌಢಸಾಹಿತ್ಯಕ್ಕಿಂತಲೂ ಕಷ್ಟದ್ದು ಎಂಬ ಅರಿವಿನಿಂದಲೇ ಅವರು ಬರೆದದ್ದು. ಅಂತೆಯೇ ತಾವು ನಂಬಿದ ಬದುಕಿನ ಮೌಲ್ಯಗಳನ್ನು ಮಕ್ಕಳ ಸಾಹಿತ್ಯದಲ್ಲೂ ಕಂಡರಿಸುವಲ್ಲಿ ಆತ ಎಚ್ಚರಿಕೆ ವಹಿಸುತ್ತಾರೆ. ತನ್ನ ಆಶಯವನ್ನು ದಟ್ಟ ವಿವರಗಳಲ್ಲಿ ಹಿಡಿದಿಡುವ ಚೆಕೋವ್ ಹೇಳಿಕೆಯ ರೂಪದಲ್ಲಿ ಅಭಿವ್ಯಕ್ತಿಸಿದುದು ತೀರ ಅಪರೂಪಕ್ಕೆ. 'ಕಷ್ಟಾಂಕ' ಆತ ಬರೆದ ಒಂದು ನೀಳ್ಗತೆ. ಕಷ್ಟಾಂಕ ಒಂದು ನಾಯಿಯ ಹೆಸರು. ಕತೆಯೆಲ್ಲ ಈ ನಾಯಿ ಕತೆಯೇ. ಒಂದು ಪರಿಸರದ ಮನೋಸ್ಥಿತಿಯನ್ನೇ ಈ ನಾಯಿಯ ಮೂಲಕ ಚೆಕಾವ್ ನಮ್ಮ ಮುಂದಿಡುತ್ತಾರೆ.

ಕತೆ ಸಾಗುವುದು ಹೀಗೆ. ಲೂಕಾ ಅಲೆಕ್ಸಾಂಡ್ರಿಚ್ ಒಬ್ಬ ಬಡಗಿ, ಶ್ರಮವಹಿಸಿ ದುಡಿವ ಬಡವ. ಹೊಟ್ಟೆ ಬೆನ್ನಿಗೆ ಹತ್ತಿದಂತೆ ಬಡಕಲಾದ ಕಷ್ಟಾಂಕ ಈ ಬಡಗಿಯ ಮನೆಯಲ್ಲೇ ಇದ್ದುದು. ಬಡಗಿಯ ಹುಡುಗ ಫೆದ್ಯೋಷ್ಕ ಅದಕ್ಕೆ ಜೊತೆನೀಡುವವ. ಬೇರೆ ಬೀದಿ ನಾಯಿ ಬಂದರೆ ಅದರೊಟ್ಟಿಗೆ ಸೇರಿಸದಷ್ಟು ಅಕ್ಕರೆ ಅವನಿಗೆ.

ಒಂದು ದಿನ ಈ ಬಡಗಿ ಕಪ್ಪಾಂಕಳನ್ನು ತನ್ನೊಡನೆ ಹೊರಗೆ ಕರೆದುಕೊಂಡು ಹೋದ. ತನ್ನ ತಂಗಿಯಮನೆ, ಗಿರಾಕಿಗಳು, ಸ್ನೇಹಿತರ ಮನೆ ಎಲ್ಲಕಡೆ ತಿರುಗಾಡಿದ. ಹೊರಗಿನ ಜಗತ್ತನ್ನು ನೋಡಿರದ ಕಪ್ಪಾಂಕಳಿಗೆ ಏನೆಲ್ಲ ಕಂಡ ಅಚ್ಚರಿ. ದಾರಿಯಲ್ಲಿ ಬ್ಯಾಂಡ್ ಬಾರಿಸುವ ಸೈನಿಕರ ಗುಂಪೊಂದನ್ನು ನೋಡುತ್ತ ನಿಂತ ಯಜಮಾನನನ್ನು ಕೃಪ್ಪಾಂಕ ಕಳೆದುಕೊಂಡು ಬಿಡುತ್ತದೆ. ಎಷ್ಟು ಹುಡುಕಿದರೂ ಸಿಗುವುದಿಲ್ಲ. ತಿರುಗಿ ಮನೆಗೆ ಹೋಗೋಣವೆಂದರೆ ದಾರಿ ಸಿಗದು. ಹೊಟ್ಟೆ ಹಸಿವಾಗಿದೆ, ಕಾಲುಗಳು ನೋಯುತ್ತಿವೆ. ಕತ್ತಲಾಗತ್ತ ಬಂದಿದೆ. ಬಳಲಿದ ಕಪ್ಪಾಂಕ ಯಾರದೊ ಮನೆಯ ಮುಂದೆ ಬಿದ್ದುಕೊಳ್ಳುತ್ತಾಳೆ. ಬೆಳಗಾದಾಗ ಮುಚ್ಚಿದ ಬಾಗಿಲು ಸಪ್ಪಳ ಮಾಡುತ್ತಾ ತೆರೆದು ಕೊಳ್ಳುತ್ತದೆ. ದಪ್ಪಗಿನ ಗಿಡ್ಡ ವ್ಯಕ್ತಿಯೊಬ್ಬ ಕಾಣಿಸಿಕೊಳ್ಳುತ್ತಾನೆ. ಕಪ್ಪಾಂಕಳಿಗೆ ಹೊಡೆದು, ಓಡಿಸುವ ಬದಲು ಮರುಕದಿಂದ ಒಳಗೆ ಕರೆದುಕೊಂಡು ಹೋಗುತ್ತಾನೆ. ತನ್ನೊಟ್ಟಿಗೆ ಅದಕ್ಕೂ ತಿನ್ನಲು ಕೊಡುತ್ತಾನೆ, ಸೋಫಾದ ಮೂಲೆಯೊಂದರಲ್ಲಿ ಮಲಗಿಸಿ ಹೊದಿಸುತ್ತಾನೆ. ಕಪ್ಪಾಂಕಳಿಗೆ ನಂಬಲಾಗದಂತಹ ಸುಖದ ವಾತಾವರಣ ದೊರೆಯುತ್ತದೆ.

ಹಳೆಯ ಯಜಮಾನನ ಮನೆಯ ನೆನಪು ಮಾತ್ರ ಕಪ್ಪಾಂಕಳ ತಲೆಯಿಂದ ಮಾಸುವುದಿಲ್ಲ. ಫೆದೋಷ್ಕನ ನೆನಪು ಕಾಡುತ್ತದೆ. ಬಡಗಿಯ ಕೆಲಸದ ಬೆಂಚಿನಕೆಳಗೆ ಘಾಟುವಾಸನೆಯ ನಡುವೆ ಬೆಚ್ಚಗೆ ಒರಗುತ್ತಿದ್ದುದು ನೆನಪಾಗುತ್ತದೆ. ಮತ್ತೊಂದು ಹೊಸ ಬದುಕು ಶುರುವಾಗಿದೆ ಕಪ್ಪಾಂಕಳಿಗೆ ಇಲ್ಲಿ. ಆದರೆ ಪ್ರತಿಸಲವೂ ಆತಂಕ, ಕುತೂಹಲ, ಯಜಮಾನ ಇಲ್ಲದಾಗ ಕಪ್ಪಾಂಕ ಮನೆಯಲ್ಲಿ ಮತ್ತೇನಿದೆ ಎಂದು ಹುಡುಕತೊಡಗುತ್ತದೆ. ಒಳಕೋಣೆಯಲ್ಲಿ ಒಂದು ಬಾತುಕೋಳಿಯನ್ನು, ಒಂದು ಬೆಕ್ಕನ್ನು ನೋಡುತ್ತದೆ. ಮೊದಲ ಭೇಟಿಯಲ್ಲೇ ಬಾತುಕೋಳಿಯ ವಾಚಾಳಿತನವನ್ನು, ಬೆಕ್ಕಿನ ಅನಾಸಕ್ತಿಯನ್ನು ಗ್ರಹಿಸುತ್ತದೆ.

ದಿನ ಕಳೆದ ಹಾಗೆ ಹೊಸ ಯಜಮಾನನ ದಿನಚರಿಯಲ್ಲಿ ಕಪ್ಪಾಂಕ ಚಟುವಟಿಕೆಯಿಂದ ತೊಡಗಿಕೊಳ್ಳುತ್ತದೆ. ಪ್ರತಿದಿನ ಆತ ಕಟ್ಟಿಗೆಯ ಚೌಕೊಂದನ್ನು ತರುತ್ತಿದ್ದ. ಅದಕ್ಕೆ ಜೋತುಬಿಟ್ಟ ಗಂಟೆಗೆ ಪಿಸ್ತೂಲೊಂದರ ಟ್ರಿಗರಿಗೆ ದಾರದಿಂದ ಕಟ್ಟುತ್ತಿದ್ದ. ಗಂಟೆ ಬಾರಿಸುವ, ಪಿಸ್ತೂಲು ಹಾರಿಸುವ ತರಬೇತಿ ಬಾತುಕೋಳಿ ಮತ್ತು ಬೆಕ್ಕಿಗೆ ನೀಡುತ್ತಿದ್ದ. ಆತನ ಹೆಂಡತಿ ಹಂದಿಯೊಂದನ್ನು ತರುತ್ತಿದ್ದಳು. ಬಾತು ಕೋಳಿ ಹಂದಿಯ ಮೇಲೆ, ಬೆಕ್ಕು ಬಾತುಕೋಳಿಯ ಮೇಲೆ ಹತ್ತ ಬೇಕು. ಕೇವಲ ವೀಕ್ಷಕಳಾಗಿ ಬೆರಗುಗಣ್ಣಿನಿಂದ ನೋಡುತ್ತಿದ್ದ ಕಪ್ಪಾಂಕಳಿಗೂ ಇದೇ ಬಗೆಯ ತರಬೇತಿ ಕ್ರಮೇಣ ಪ್ರಾರಂಭ ವಾಯಿತು. ಕಪ್ಪಾಂಕ ಮಾತ್ರ ಸೂಕ್ಷ್ಮವಾಗಿ ಗ್ರಹಿಸಿ, ಬೇಗನೆ ಕಲಿತು ಬಿಡುತ್ತಿದ್ದಳು.

ಹೊಸ ಯಜಮಾನನ ಮನೆಯಲ್ಲಿ ದಿನದಿನಕ್ಕೆ ಕಪ್ಪಾಂಕ ಮೈತುಂಬಿಕೊಂಡಳು. ಮೊದಲಿನ ಹಾಗೆ ಸೊಣಕಲು ಮೈಯವಳಲ್ಲ ಅವಳು ಈಗ. ಅಷ್ಟಾದರೂ ಕಪ್ಪಾಂಕಳಿಗೆ ತನ್ನ ಹಳೆಯ ಮನೆಯ ನೆನಪು ಕಾಡದೇ ಇರುತ್ತಿರಲಿಲ್ಲ. ಅಲ್ಲಿನದೇನನ್ನೋ ಕಳೆದುಕೊಂಡ ಹಾಗೆಯೇ ಅವಳಿಗೆ ಭಾಸವಾದಹಾಗಿತ್ತು. ಈ ಮಧ್ಯೆ ವಾಚಾಳಿ ಯಾದ ಬಾತುಕೋಳಿಗೆ ಜ್ವರಕಾಣಿಸಿಕೊಂಡು, ಯಜಮಾನನ ಉಪ ಚಾರದ ನಡುವೆಯೂ ಉಸಿರೆಳೆಯುತ್ತದೆ. ಕಪ್ಪಾಂಕಳಿಗೆ ಆ ವಿಶಾಲ ವಾದ ಮನೆಯಲ್ಲಿ ಸಾವಿನ ಭಯ ತುಂಬಿಕೊಂಡಂತೆನಿಸುತ್ತದೆ.

ಒಂದು ದಿನ ಯಜಮಾನ ಬೇರೆಲ್ಲಿಗೋ ಇವರನ್ನು ಕರೆದೊಯ್ಯು ತ್ತಾನೆ. ವಿಚಿತ್ರವಾದ ಉಡುಗೆ ತೊಡುತ್ತಾನೆ. ಮುಖಕ್ಕೆ ಬಣ್ಣ ಬಳಿದುಕೊಳ್ಳುತ್ತಾನೆ; ಗುರುತು ಸಿಗದಂತಾಗುತ್ತಾನೆ. ಕಪ್ಪಾಂಕಳಿಗೆ ದಿಗಿಲೋ ದಿಗಿಲು, ಸಣ್ಣಗೆ ಮೈನಡುಕ. ನಂತರ ಸ್ವಲ್ಪಹೊತ್ತಿಗೆ ಕಪ್ಪಾಂಕ ಮತ್ತು ಬೆಕ್ಕು ಪೆಟ್ಟಿಗೆಯೊಂದರಲ್ಲಿ ಕುಳಿತು ಸ್ಟೇಜ್ ಮೇಲೆ ಹೋಗುತ್ತವೆ. ಕಣ್ಣುಕುಕ್ಕಿಸುವ ಬೆಳಕು, ದೊಡ್ಡ ಸಂಖ್ಯೆಯ ಪ್ರೇಕ್ಷ ಕರು, ಗದ್ದಲ, ಶಿಳ್ಳು. ಯಜಮಾನ ಹಾಸ್ಯಮಯವಾಗಿ ಮಾತನಾ

ಡುತ್ತ ಪೆಟ್ಟಿಗೆ ತೆರೆಯುತ್ತಾನೆ. ಬೆಕ್ಕು, ಕಪ್ಪಾಂಕ ಹೊರಗೆ ಬರುತ್ತವೆ. ಬೆಕ್ಕು ತನ್ನ ಎಂದಿನ ನಿರಾಸಕ್ತಿಯಲ್ಲಿಯೇ ಇದೆ. ಕಪ್ಪಾಂಕಳಿಗೋ ಈ ವಾತಾವರಣ ಗಲಿಬಿಲಿಗೊಳಿಸುತ್ತದೆ. ಅದು ಮರುಮಾತನಾಡದೆ ಯಜಮಾನ ಹೇಳಿದಂತೆ ಪೆಟ್ಟಿಗೆ ಏರುತ್ತದೆ. ಆದರೆ ಅಷ್ಟರಲ್ಲೇ ಪ್ರೇಕ್ಷಕರ ನಡುವಿನಿಂದ ದನಿಯೊಂದು ಕೇಳುತ್ತದೆ. 'ಅಪ್ಪಾ, ಅಲ್ಲಿ ನಮ್ಮ ಕಪ್ಪಾಂಕ'. ಹೌದು ಅದು ಫೆದೋಷ್ಕನ ದನಿಯೇ. ಕಪ್ಪಾಂಕ ಎಲ್ಲಾ ಮರೆತು ವೇದಿಕೆಯಿಂದ ಜಿಗಿದು ತನ್ನ ಯಜಮಾನನ ಬಳಿಗೆ ಓಡಿಬಿಡುತ್ತದೆ.

ಇದಿಷ್ಟು ಕತೆ, ಮಕ್ಕಳಿಗೆ ಓದಿಸುವ ನಾಯಿಯ ಕತೆ. ಆದರೆ ಮಕ್ಕಳಲ್ಲಿಯೂ ಗಾಂಭೀರ್ಯದ ಓದನ್ನು ನಿರೀಕ್ಷಿಸುವ ಕತೆ. ಜೊತೆಗೆ ಸೂಕ್ಷ್ಮವಾಗಿ ಮಕ್ಕಳಿಗೆ ನಾಯಿಯ ಸುತ್ತಲಿನ ಪರಿಸರದ ಬಗೆಗೆ ಚಿಂತಿಸ ಹಚ್ಚುವ ಬರವಣಿಗೆ. ಹಾಗೆ ನೋಡಿದರೆ ಚೆಕಾವ್ ತನ್ನ ಸಮಾಜವಾದೀ ಚಿಂತನೆಯ ಹಿನ್ನೆಲೆಯಲ್ಲೇ ಈ ಕತೆಯ ಹೊಳಹನ್ನು ಕಂಡಿದ್ದಾರೆ. ಈ ನಾಯಿ ಕತೆಯಲ್ಲಿ ಚೆಕಾವ್ ಯಾವುದೇ ಫ್ಯಾಂಟಸಿ ತಂತ್ರತಂದಿಲ್ಲ. ನಾಯಿ ನಾಯಿಯಾಗಿಯೇ ಎಲ್ಲವನ್ನು ಹೇಳುತ್ತದೆ. ಮಕ್ಕಳ ಗ್ರಹಿಕೆಗೆ ನಿಲುಕುವ ಕತೆಯ ಎಳೆಯಿದೆ, ಬಿಡದೆ ಓದಿಸಿಕೊಂಡು ಹೋಗುತ್ತದೆ. ಕನ್ನಡದಲ್ಲಿ ಈ ಬಗೆಯ ಬರವಣಿಗೆ ಇಲ್ಲವೆನ್ನುವಷ್ಟು ವಿರಳ. ಅದರಲ್ಲೂ ನಮ್ಮ ಸಾಮಾಜಿಕ ಪರಿಸರದ ಬಗೆಗೆ ಚಿಂತಿಸಹಚ್ಚುವ ವಿಷಯಗಳಸುತ್ತ ಸಾಹಿತ್ಯ ತೀರ ಕಡಿಮೆ. ಪ್ರೌಢ ಶೈಲಿಯು ಮಕ್ಕಳ ವಯೋಮಾನಕ್ಕೆ ಅಗತ್ಯವಾಗುವ ಗಂಭೀರವಾದ ಓದು ನೀಡುವಲ್ಲಿ ಈ ಬಗೆಯ ಬರವಣಿಗೆಯ ಅವಶ್ಯಕತೆ ಇದೆ. ಚೆಕಾವ್ ಅಂಥವರ ಕೃತಿಗಳು ನಮಗೆ ಈ ನಿಟ್ಟಿನಲ್ಲಿ ಎಷ್ಟೋ ಸಂಗತಿಗಳನ್ನು ಹೇಳುತ್ತವೆ. ●

ಮಕ್ಕಳ ಸಾಹಿತಿಗಳಲ್ಲಿ, ವಿಮರ್ಶಕರಲ್ಲಿ, ಆಸಕ್ತರಲ್ಲಿ ಒಂದಿಷ್ಟು ಪ್ರಶ್ನೆ.........

ಮಕ್ಕಳ ಸಾಹಿತ್ಯ ಮತ್ತು ಸೃಜನಶೀಲತೆ

ಮಕ್ಕಳ ಸಾಹಿತ್ಯಕ್ಕೂ ಹಿರಿಯರ ಸಾಹಿತ್ಯಕ್ಕೂ ಒಂದು ದೊಡ್ಡ ಅಂತರವಿದೆ. ಮಕ್ಕಳ ಸಾಹಿತಿ ತಾನು ದೊಡ್ಡವನಾಗಿ ಮಕ್ಕಳಿಗಾಗಿ ಬರೆಯಬೇಕಾದುದು ಅದು. ಸೃಜನಶೀಲತೆಯ ವಿಷಯದಲ್ಲಿ ಕಾಡುವ ಸಂಗತಿ ಅದೇ.

ತನ್ನ ಅನುಭವವನ್ನು ತಕ್ಕದಾಗಿ ಅಭಿವ್ಯಕ್ತಿಸುವುದೊಂದು ಸಹಜದಕ್ರಿಯೆಯಾದರೆ ಇಲ್ಲಿ ಬೇರೆವಯೋವರ್ಗದವರಿಗಾಗಿ ಹಿರಿಯ ರಾದವರು ಬರೆಯಬೇಕು. ಇಂಥಲ್ಲಿ ಸೃಜನಶೀಲತೆ–ಒಂದು ಸಾಹಿತ್ಯ ಕೃತಿಯ ಅಭಿವ್ಯಕ್ತಿಗೆ ಬೇಕಾಗುವ ಮೂಲ ಗುಣ–ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎನ್ನುವುದು ಆ ಪ್ರಶ್ನೆ.

ತುಸು ವಿವರ : ಮಕ್ಕಳಿದ್ದಾಗಿನ ಅನುಭವಗಳನ್ನು, ನೆನಪಿನಲ್ಲಿ ಉಳಿದವುಗಳನ್ನು ಆಧರಿಸಿ ಇಂಥ ರಚನೆ ಬರಬಹುದು, ಅದನ್ನೂ ಕೂಡ ಮಕ್ಕಳಿಗೆ–ಅವರ ಭಾಷೆಯಲ್ಲಿ, ಅವರಿಗೆ ಮುಟ್ಟುವ ಹಾಗೆ ಹೇಳಬೇಕಲ್ಲ ? ಸಾಹಿತ್ಯವಂತೂ ರಚನೆಯಾಗುತ್ತಲೇ ಇದೆ. ಮಕ್ಕಳಿಗಾಗಿ ಬರೆಯುವುದೇ ಒಂದು ಮನೋಧರ್ಮ, ಅದು ಸಹಜವಾಗಿಯೇ ಕೆಲವರಲ್ಲಿ ನಡೆದುಬಿಡುತ್ತದೆ. ಉದ್ದೇಶಪಟ್ಟು ಮಕ್ಕಳಿಗಾಗಿಯೇ ಬರೆಯಬೇಕೆಂದು ಕೂಡುವ ಲೇಖಕರ ಗುಂಪೂ ಇದೆ. ಅಂತೂ

ಈ ಗೊಂದಲದ ನಡುವೆ "ಸೃಜನಶೀಲತೆ" ತನ್ನನ್ನು ಹೇಗೆ ಉಳಿಸಿ ಕೊಳ್ಳುತ್ತದೆ ? ಹೇಗೆ ಸಾಧ್ಯವಾಗುತ್ತದೆ ?

(ತಮ್ಮ ಅಭಿಪ್ರಾಯ ಬರೆದು ಕಳುಹಿಸಿ)

ಈ ನಿಟ್ಟಿನಲ್ಲಿ ಶ್ರೀ ಎಂ. ಎಸ್. ಕೆ. ಪ್ರಭು ಅವರು ನಮ್ಮ ವೇದಿಕೆಗೆ ಬರೆದ ಪತ್ರವೊಂದರಲ್ಲಿನ ಕೆಲ ಸಾಲುಗಳನ್ನು ನಿಮ್ಮೊಡನೆ ಹಂಚಿಕೊಳ್ಳುವ ಆಸೆ.

"......ಮಕ್ಕಳಿಗಾಗಿ ಸಾಹಿತ್ಯ ಬರೆಯುವಾಗ ಮಕ್ಕಳಲ್ಲೇ ಸಹಜವಾಗಿರುವ ಸೃಜನಶೀಲ ಸ್ವಭಾವವನ್ನು ಆದಷ್ಟು ಮಟ್ಟಿಗೆ ಮೈಗೂಡಿಸಿಕೊಂಡರೆ ಆ ಬರವಣಿಗೆ ಸಹಜವಾಗಿರುತ್ತದೆಂದು ನನ್ನ ಭಾವನೆ.

ಮಕ್ಕಳಿಗೆ ನೀತಿ ಹೇಳುವ, ವಿಧಿನಿಷೇಧಗಳನ್ನು ಹೇರುವ ಅಥವಾ "ಮಕ್ಕಳ ಅಭಿರುಚಿಗೆ ಇದು ಸೂಕ್ತ" ಎಂದು ಲೆಕ್ಕಾಚಾರಹಾಕಿ ಬರೆದ ಸಾಹಿತ್ಯಮಕ್ಕಳ ಸಾಹಿತ್ಯವಾಗಬಲ್ಲದೇ ಎಂದು ಸಂದೇಹ. ಇಂಥ ಸಂದರ್ಭಗಳಲ್ಲಿ ಹಿರಿಯರ (ವಯಸ್ಸಾದವರ) ಅಜ್ಞಾನ ಮತ್ತು Prejudic ಗಳು ದಾರಿ ತಪ್ಪಿಸುತ್ತವೆ. ನಮಗೆ ವಯಸ್ಸಾದಂತೆಲ್ಲಾ ಮಕ್ಕಳಿದ್ದಾಗ ಪ್ರಕಟವಾಗುತ್ತಿದ್ದ ಸೃಜನಶೀಲತೆ ಕಮ್ಮಿಯಾಗಿ ಅವರ ಬದಲು ಅಜ್ಞಾನ ಮತ್ತು ಪೂರ್ವಾಗ್ರಹಗಳು ಬಲವಾಗಿ ಮುಗ್ಧ ಕುತೂಹಲ ಮತ್ತು ಸಹಜ ಅಭಿವ್ಯಕ್ತಿಗಳಿಗೆ ಬದಲಾಗಿ, ಬುದ್ಧಿವಂತಿಕೆ ಯಿಂದ ಹುಟ್ಟಿದ ಭ್ರಮೆಗಳು ಮಕ್ಕಳ ಮನೋಧರ್ಮ ಏನಿರ ಬೇಕು, ಹೇಗಿರಬೇಕು ಎಂದು ಒಡ್ಡೊಡ್ಡಾಗಿ ನಿರ್ದೇಶಿಸಿ ತಥಾಕಥಿತ "ಮಕ್ಕಳ ಸಾಹಿತ್ಯ" ಉತ್ಪಾದನೆಯಾಗುವ ಸಂಭವವೇ ಜಾಸ್ತಿ. ಮಕ್ಕಳು ಹೀಗೆ ಬಯಸುತ್ತಾರೆ, ಹೀಗೆ ಅನುಭವಿಸುತ್ತಾರೆ, ಹೀಗೆ ನಡೆದುಕೊಳ್ಳುತ್ತಾರೆ ಇತ್ಯಾದಿ ಕೃತಕ ತರ್ಕದಿಂದ, ಇಂಥ ತರ್ಕ ದೊಡ್ಡವರ Hall-mark. ಒಳ್ಳೇ ಮಕ್ಕಳ ಸಾಹಿತ್ಯ ಸೃಷ್ಟಿಯಾಗ ಲಾರದು. ಮಕ್ಕಳ ಸಾಹಿತ್ಯ ಬರೆಯುವವರು ಮಕ್ಕಳ ಮನೋಧರ್ಮ

ದೊಂದಿಗೆ ತಾದಾತ್ಮ್ಯ ಹೊಂದಿರಬೇಕು ಎಂಬ ಸಮೀಕರಣ ಸಿದ್ಧಾಂತವನ್ನು ಪ್ರತಿಪಾದಿಸುವುದು ತುಂಬಾ ಸಂಕೀರ್ಣ ವಿಷಯವನ್ನು ಸರಳೀಕರಣ ಮಾಡಿದಂತೆ ಆಗುತ್ತದೆ. ಆದರೂ ಈ ಸಮೀಕರಣದಲ್ಲಿ ಒಂದಂಶ ಸತ್ಯವಿದೆಯೆಂದು ಅನಿಸುತ್ತದೆ. ಮಕ್ಕಳ ಮನೋಧರ್ಮ ಎಂದಾಗ ದೊಡ್ಡವರು ಗ್ರಹಿಸುವ ಅರ್ಥದಲ್ಲಿ ಅದು 'ಬಾಲಿಶ' ಮಾತ್ರ ಆಗಬಾರದು. ಇದೇನೂ ಎಚ್ಚರಿಕೆವಹಿಸಿ ಸಾಧಿಸಬಹುದಾದ ಬೌದ್ಧಿಕ ಕಸರತ್ತೂ ಅಲ್ಲ. ನಿಮಗೆ ಗೊತ್ತಿರುವಂತೆ ಮಕ್ಕಳ ಅನೇಕ ಪ್ರಶ್ನೆಗಳು ದೊಡ್ಡವರನ್ನು ತತ್ತರಿಸುವಂತೆ ಮಾಡುತ್ತವೆ. ಇಂಥ ಸಂದರ್ಭಗಳಲ್ಲಿ ಮಕ್ಕಳು ತಮ್ಮ ಸಹಜ ಗ್ರಹಿಕೆಗೂ ದೊಡ್ಡವರ ಗ್ರಹಿಕೆಗೂ ಇರುವ ಕಂದಕವನ್ನು ದಾಟಲು ಪ್ರಯತ್ನಿಸುತ್ತಿರಬಹುದು. ದೊಡ್ಡವರ ತರ್ಕದಿಂದ ಮಕ್ಕಳು ಬೆಳೆದಂತೆಲ್ಲಾ ತಮ್ಮ ಸಹಜಧರ್ಮವನ್ನು ಕಳೆದುಕೊಳ್ಳುತ್ತಾರೇನೋ. 'ಪ್ರಬುದ್ಧ' ಎಂಬ ಹಣೆಪಟ್ಟಿಯನ್ನು ಹೊತ್ತ ದೊಡ್ಡವರ ಸಾಹಿತ್ಯವೇ ಎಷ್ಟೋ ವೇಳೆ ಕೇವಲ ಅಪಕ್ವ ಬರವಣಿಗೆಯಾಗಿ ಬೌದ್ಧಿಕತೆಯನ್ನೂ ಸಾಧಿಸದ, ಸೃಜನಶೀಲವೂ ಅಲ್ಲದ ಒಣ ತರ್ಕವಾಗುವುದನ್ನೂ ನೀವು ಕಂಡಿದ್ದೀರಿ.

○

‘ಅಮ್ಮು ಅವರ ಬಸ್ಸು ಸವಾರಿ’ –
ಒಂದು ಅನಿಸಿಕೆ

— ಮ. ರಾ. ರುದ್ರಾಚಾರ

ಬಾಲ್ಯ, ಜೀವನದ ಒಂದು ವಿಶಿಷ್ಟವಾದ ಕಾಲಘಟ್ಟ. ಮೂರು ವರ್ಷಗಳಿಂದಲೇ ಪ್ರಾರಂಭವಾಗುವ ಮಗುವಿನ ಅರಿವಿನ ದಾಹ, ಕುತೂಹಲಗಳು ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋಗುತ್ತವೆ. ಇವುಗಳನ್ನು ತಣಿಸಿಕೊಳ್ಳಲು ಮಗು ನೂರಾರು ಪ್ರಶ್ನೆಗಳನ್ನು ಕೇಳುತ್ತದೆ. ಹೊರಗಿನ ಪ್ರಪಂಚವನ್ನು ಬೆರಗಿನಿಂದ ನೋಡುತ್ತದೆ. ಭಾಗಶಃ ಜ್ಞಾನವನ್ನು ಅನುಭವಗಳಿಂದ ಪಡೆಯುತ್ತದೆ. ಹೀಗೆಯೇ ಮುಗ್ಧತೆಯಿಂದ ಪ್ರಬುದ್ಧತೆಯೆಡೆಗೆ ಹಂತ ಹಂತವಾಗಿ ಸಾಗುತ್ತದೆ.

‘ಅಮ್ಮು ಅವರ ಬಸ್ಸು ಸವಾರಿ’ ತಮಿಳು ಲೇಖಕ ವಳ್ಳಿ ಕಣ್ಣನ್ ಅವರ ಇಂತಹ ಎಂಟು ವರ್ಷದ ಬಾಲೆಯೊಬ್ಬಳ ಬಸ್ಸಿನ ಪ್ರಯಾಣದ ಅನುಭವಗಳನ್ನು ತಿಳಿಸುವ ಪುಸ್ತಕ.

ಪುಸ್ತಕದ ಹೆಸರನ್ನು ಓದಿದಾಗ ಮೇಲುನೋಟಕ್ಕೆ ಯಾರೋ ಪ್ರತಿಷ್ಠಿತ ಮಹಿಳೆಯೊಬ್ಬರ ಬಸ್ಸಿನ ಪ್ರಯಾಣದ ಬಗ್ಗೆ ಇರಬಹುದು ಎಂದು ಅನಿಸಿಬಿಡುತ್ತದೆ. ಆದರೆ ಇದು ವಳ್ಳಿಯಮ್ಮ ಎನ್ನುವ ಎಂಟು ವರ್ಷದ ಬಾಲೆಯ ಮೂಲಕ ಮಕ್ಕಳ ಬಾಲ್ಯ ಜೀವನವನ್ನು ಅಂದರೆ ಪ್ರಮುಖವಾಗಿ ಅವರ ತೀವ್ರ ಆಸಕ್ತ ಹಾಗೂ ಕುತೂಹಲ ಮನಸ್ಸು ತಿಳಿವಿಗಾಗಿ ಹುಡುಕಾಟ ನಡೆಸುವುದನ್ನು ವಿವರಿಸುತ್ತದೆ.

ವಳ್ಳಿಗೆ ಮನೆಯ ಹೊರ ಬಾಗಿಲಲ್ಲಿ ನಿಂತು ರಸ್ತೆಯಲ್ಲಿ ನಡೆಯುವುದನ್ನೆಲ್ಲ ನೋಡುವುದೆಂದರೆ ಎಲ್ಲಿಲ್ಲದ ಮೋಜು. ದಿನಗಟ್ಟಲೇ ನಿಂತು ನೋಡಿದರೂ ಬೇಸರವಿಲ್ಲ. ಪ್ರತಿದಿನವೂ ಹೊಸತನ ಬಗೆ

ಬಗೆಯ ಜನ, ಬಗೆಬಗೆಯ ಘಟನೆಗಳು. ರಸ್ತೆಯಲ್ಲಿ ಹೋಗಿಬರುವ ವಾಹನಗಳು, ಎತ್ತಿನಗಾಡಿ, ಕೀಲೆಣ್ಣೆಯಿಲ್ಲದ ಗಾಡಿಯ ಕಿರ್ರೋ ಶಬ್ದ, ತಲೆಯಾಡಿಸುತ್ತ ಎಳೆಯುವ ಎತ್ತುಗಳ ಕೊರಳಂಗಳ ಗಂಟೆ ಗಳ ಕಿಣಿ ಕಿಣಿ ನಾದ, ಜೊತೆಯಲ್ಲಿ ಬರುವ ನಾಯಿ ದುಡುದುಡು ಮುಂದೆ ಓಡಿ, ಹಿಂದೆ ಬಂದು, ಸುತ್ತಮುತ್ತ ಮೂಸಿ, ಮೂತ್ರ ವಿಸರ್ಜಿಸಿ ಮತ್ತೆ ಗಾಡಿಯ ಕೆಳಗೆ ಬಂದು ಸಾಗುವ ತಮಾಷೆಯ ದೃಶ್ಯಗಳು, ಭಿಕ್ಷುಕರು, ತಲೆ ಮೇಲೆ ಬುಟ್ಟಿ ಹೊತ್ತು ಮಾರಲು ಬರುವ ಸಣ್ಣ ಪುಟ್ಟ ವ್ಯಾಪಾರಿಗಳು, ಹೀಗೆ ಒಂದಲ್ಲ ಒಂದು ಬಗೆಯ ಪ್ರಸಂಗಗಳಿಂದ ವಳ್ಳಿ ಅನುಭವಗಳನ್ನು ಪಡೆಯುತ್ತಾ ಹೋಗುತ್ತಾಳೆ.

ವಳ್ಳಿಗೆ ಅತ್ಯಂತ ಖುಷಿ ಕೊಡುವ ಹಾಗೂ ಬೇಸರವೇ ಇಲ್ಲದ ಸಂಗತಿಯೆಂದರೆ, ಗಂಟೆಗೆ ಒಮ್ಮೆ ಬಂದು ಹೋಗುವ ಊರ ಬಸ್ಸು ಹಾಗೂ ಅದರಲ್ಲಿ ಬರುವ ಹೊಸ ಹೊಸ ಪ್ರಯಾಣಿಕರು. ಪ್ರತಿ ದಿನವೂ ಈ ದೃಶ್ಯವನ್ನು ನೋಡುತ್ತಾ ನೋಡುತ್ತಾ ಬೆಳೆದ ಆಕೆಗೆ ಒಮ್ಮೆ ಬಸ್ಸಿನಲ್ಲಿ ಪ್ರಯಾಣ ಮಾಡಬೇಕು ಎಂಬ ಹಂಬಲ. ಅದಕ್ಕಾಗಿ ಏನೆಲ್ಲ ಸಿದ್ಧತೆ ನಡೆಸಿ ತಿಂಗಳುಗಟ್ಟಲೇ ಚಿಲ್ಲರೆ ಪುಟಿಗಾಸು ಕೂಡಿಹಾಕಿ ಒಂದು ದಿನ ಬಸ್ಸಿನಲ್ಲಿ ಪ್ರಯಾಣ ಮಾಡಲು ಹೊರಟೇ ಬಿಡುತ್ತಾಳೆ. ಬಸ್ಸು ಹತ್ತುವಾಗ ಸಹಾಯ ಮಾಡಲು ಬರುವ ಕಂಡಕ್ಟರಿಗೆ "ಛೀ ನಿಮ್ಮ ಸಹಾಯ ಬೇಕಿಲ್ಲ. ನಾನೇ ಹತ್ತುತ್ತೇನೆ" ಎಂದು ಖುಷಿ ಸ್ವಭಾವದ ಕಂಡಕ್ಟರಿನಿಂದ 'ಅಮ್ಮಾ ಅವರು ಬರುತ್ತಿದ್ದಾರೆ, ಎಲ್ಲರೂ ದಾರಿ ಬಿಡಿ' ಎಂದು ಹೇಳಿಸಿಕೊಂಡು ನಾಚುತ್ತಾಳೆ. ಹೆಣ್ಣು ಮಗುವಾಗಿ ಹಿರಿಯರ ಅಂಕಿತದಲ್ಲಿ ಉಳಿದ ವಳ್ಳಿ ಬಸ್ಸಿನಲ್ಲಿ ಮಾತ್ರ ಎಲ್ಲಿಲ್ಲದ ಧೈರ್ಯದ ಹುಡುಗಿ. ಬಸ್ಸಿನಲ್ಲಿ ಪ್ರಯಾಣಿಸುವಾಗ ಕಿಟಕಿಯಿಂದ ಕಾಣುವ ದೃಶ್ಯಗಳನ್ನು ವಳ್ಳಿ ತೆರೆದ ಕಣ್ಣುಗಳಿಂದ ಎವೆ ಇಕ್ಕದೆ ನೋಡು ತ್ತಾಳೆ. ತಾಳೆಮರಗಳು ಹಸಿರು ಹುಲ್ಲುಗಾವಲು, ಅದರಾಚೆಗಿನ ಬೆಟ್ಟ ಗಳ ಸಾಲು, ಅದಕ್ಕೆ ತಗುಲಿಕೊಂಡಂತೆ ಕಾಣುವ ನೀಲಬಾನು

ಹಾರುವ ಹಕ್ಕಿಗಳು, ಹಸಿರು ಹೊಲ ಗದ್ದೆಗಳು, ಹಚ್ಚ ಹಸಿರಿನ ಸುಂದರ ದೃಶ್ಯ. ಎಲ್ಲವನ್ನೂ ಹಸಿದವಳಂತೆ ತುಂಬಿಕೊಳ್ಳುತ್ತಾಳೆ. ಬಸ್ಸಿಗೆ ಎದುರಾಗಿ ಬಾಲ ನಿಮಿರಿಸಿಕೊಂಡು ಓಡುವ ಹಸುವನ್ನು ಕಂಡು ಚಪ್ಪಾಳೆ ತಟ್ಟಿ ಕುಣಿದಾಡುತ್ತಾಳೆ. ಧಡ ಧಡ ಎಂದು ಶಬ್ದ ಮಾಡುತ್ತಾ ಹೋದ ರೈಲು, ಪಟ್ಟಣದ ದೊಡ್ಡ ದೊಡ್ಡ ಅಂಗಡಿ ಗಳು, ಆಕರ್ಷಕ ಬಟ್ಟೆಬರೆಗಳು, ಸುಂದರ ಪದಾರ್ಥಗಳು, ಜನರ ನೂಕು ನುಗ್ಗಲು ಎಲ್ಲವನ್ನು ಮೂಕಿಯಂತೆ ಸೋಜಿಗದಿಂದ ನೋಡುತ್ತಾಳೆ.

ಮತ್ತೆ ಅದೇ ಬಸ್ಸಿನಲ್ಲಿಯೇ ವಾಪಾಸು ಬರುವಾಗ, ಈ ಮೊದಲೇ ನೋಡಿದ ಸುಂದರ ದೃಶ್ಯಗಳನ್ನು ಮೊತ್ತ ಮೊದಲ ಬಾರಿಗೆ ನೋಡುತ್ತಿರುವಂತೆ ಮತ್ತೆ ಮತ್ತೆ ನೋಡುತ್ತಾಳೆ. ಆದರೆ ಅಪ್ಪರಲ್ಲಿ ತಾನು ಬರುವಾಗ ನೋಡಿದ್ದ. ಕುಣಿದು ಕುಪ್ಪಳಿಸುತ್ತಾ ಓಡಿದ್ದ ಚೆಲುವಿನ ಜೀವಿ, ಆ ಹಸು ಯಾವುದೋ ವಾಹನದ ಅಡಿಗೆ ಸಿಕ್ಕು ಸತ್ತು ರಸ್ತೆಗೆ ಅಡ್ಡಲಾಗಿ ಬಿದ್ದ ದೃಶ್ಯ ನೋಡಿ ಅವಳು ಆನಂದಿಸುವ ಉತ್ಸಾಹ ಬತ್ತಿಹೋಗಿ ಮರದ ಬೊಂಬೆಯಂತೆ ಕೂತು ಬಿಡುತ್ತಾಳೆ. ಆಧುನಿಕ ಸೌಕರ್ಯಗಳ ಹಿಂದಿರುವ ಇನ್ನೊಂದು ಕರಾಳ ಮುಖದ ದರ್ಶನ ಆ ಮುಗ್ಧ ಜೀವಕ್ಕೆ ಆಗಿರಬಹುದೇನೋ?

ವಳ್ಳಿಕಣ್ಣನ್ ಮಕ್ಕಳ ಮನಸ್ಸನ್ನು ಸಮರ್ಥವಾಗಿ ಅರ್ಥೈಸಿ ಕೊಂಡು ಅವರ ನಿಲುಕಿನಲ್ಲಿಯೇ ವಸ್ತುಗಳನ್ನು ಸೆರೆ ಹಿಡಿದಿದ್ದಾರೆ. ವ್ಯಾಪಕವಾದ ಗ್ರಹಿಕೆ ಸರಳ ಭಾಷೆ ಹಾಗೂ ನಿರೂಪಣೆಗಳಿಂದ ಪುಸ್ತಕ ಓದುಗನನ್ನು ರಂಜಿಸುತ್ತದೆ. ಮಕ್ಕಳಿಗೊಂದು ಸಂವೇದನಾ ಶೀಲ ಬರವಣಿಗೆ ಇದು.

ಈ ಪುಸ್ತಕವನ್ನು ಎನ್. ಪ್ರಹ್ಲಾದರಾವ್ ಕನ್ನಡಕ್ಕೆ ಅನುವಾದಿಸಿ ದ್ದಾರೆ. ನ್ಯಾಷನಲ್ ಬುಕ್ ಟ್ರಸ್ಟ್, ದೆಹಲಿ. ಪ್ರಕಾಶಕರು.

ಮಕ್ಕಳ ಸಾಹಿತಿಗಳಲ್ಲಿ......

'ಪುಸ್ತಕ ಪರಿಚಯ'ಕ್ಕಾಗಿ ನಿಮ್ಮ ಪ್ರಕಟಿತ ಕೃತಿಗಳ ಎರಡು ಪ್ರತಿಗಳನ್ನು ಕಳಿಸಿಕೊಡಿ, ಮುಂದಿನ ಸಂಚಿಕೆಯಿಂದ ಈ ಅಂಕಣ ಪ್ರಾರಂಭವಾಗಲಿದೆ.

ಮಕ್ಕಳ ಸಾಹಿತ್ಯ ಮಾಹಿತಿ ಸಂಗ್ರಹ

ಮಕ್ಕಳ ಸಾಹಿತ್ಯ ಕುರಿತ ಮಾಹಿತಿಯೆಲ್ಲವನ್ನು ಒಂದೆಡೆ ಸಂಗ್ರಹಿಸಿಡುವುದು ಸಂಧ್ಯಾ ಸಾಹಿತ್ಯ ವೇದಿಕೆಯ ಚಟುವಟಿಕೆಗಳಲ್ಲಿ ಒಂದು ಅದಕ್ಕಾಗಿ ಆಸಕ್ತರೆಲ್ಲರ ಸಹಕಾರವನ್ನು ಕೋರುತ್ತೇವೆ. ತಾವು......

* ತಮಗೆ ಗೊತ್ತಿರುವ ಮಕ್ಕಳ ಸಾಹಿತ್ಯ ಕೃತಿಯ ಮಾಹಿತಿ ನೀಡಬಹುದು.

* ಒಂದೆಡೆ ಪುಸ್ತಕಗಳು ಆಸಕ್ತ ವ್ಯಕ್ತಿಯ ಮಾಹಿತಿ ಲಭ್ಯವೆಂಬ ಸೂಚನೆ ನೀಡಬಹುದು.

* ಮಕ್ಕಳ ಸಾಹಿತಿಯಾಗಿದ್ದರೆ ತಮ್ಮ ಬಿಡುಗಡೆಯಾಗಿರುವ ಕೃತಿಗಳ ಒಂದು ಪ್ರತಿ ಮುಂದಿನ ಬರವಣಿಗೆಯ ಬಗೆಗೆ ಮಾಹಿತಿ ನೀಡಬಹುದು,

* ತಮ್ಮಲ್ಲಿರುವ ಹಳೆಯ ಮಕ್ಕಳ ಪುಸ್ತಕ, ಪತ್ರಿಕೆ, ಲೇಖನ ನೀಡಬಹುದು ಇಲ್ಲವೆ ಆ ಕುರಿತು ಮಾಹಿತಿ ನೀಡಬಹುದು,

ತೆರೆದ ಅಂಚೆ

ಇವರಿಗೆ

ಪುಟ್ಟ ಮಕ್ಕಳ ಅಕ್ಕರೆಯ ಸಿಹಿಗಾಗಿ

ಪುಟಾಣಿಗಳೆ, ನಿಮಗೆಲ್ಲ ಸೊಗಸಾದ ಕತೆ, ಕವಿತೆ ಬೇಕಲ್ಲವೆ ?
'ಲೋಕದರ್ಶನ' ಪತ್ರಿಕೆಯ ಭಾನವಾರದ ಪುಟಗಳಲ್ಲಿ ನಿರೀಕ್ಷಿಸಿ.
ಲೋಕ ದರ್ಶನ, ಸುಪರ್ ಮಾರ್ಕೆಟ ರೋಡ ಗುಲಬರ್ಗಾ

ಸಂಧ್ಯಾ ಸಾಹಿತ್ಯ ವೇದಿಕೆ
ಕಲಬುರ್ಗಿ